DOP 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ – 15 ಜೂನ್ 2009
॥ ಧಿಯೋ ಯೋನಃ ಪ್ರಚೋದಯಾತ್ ॥
Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754
ಸಂಪುಟ-9 ಸಂಚಿಕೆ-6 ಪುಟಗಳು-6 Registered Under No.J/UDP/1260/2009-2011 Dated from 01-12-2008 to 30-11-2011

## ಸುಬ್ರಹ್ಮಣ್ಯ ಸಭಾದಲ್ಲಿ ಶಂಕರ ಜಯಂತಿ ಆಚರಣೆ ಮತ್ತು ಪ್ರವಚನ ಸಪ್ತಾಹ






ಚಿತ್ರಗಳು : ರಘುವೀರ ಪೆರ್ಡೂರು

ಶ್ರೀ ಸುಬ್ರಹ್ಮಣ್ಯ ಸಭಾ (ರಿ.) ಮಂಗಳೂರು ಮತ್ತು ಚಿನ್ಮಯ ಮಿಶನ್ ಸಹಯೋಗದೊಂದಿಗೆ ಶಂಕರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಏಪ್ರಿಲ್ 29ರಿಂದ ಮೇ 5ರ ವರೆಗೆ ಪೂಜ್ಯ ಸ್ವಾಮಿ ಬ್ರಹ್ಮಾನಂದಜೀ (ಮುಖ್ಯಸ್ಥರು ಚಿನ್ಮಯ ಮಿಶನ್, ಕರ್ನಾಟಕ) ಇವರಿಂದ ಪ್ರತಿದಿನ ಸಂಜೆ 6ರಿಂದ 8ರ ತನಕ ಆದಿಶಂಕರ ''ಸಾಧನಾ ಪಂಚಕಮ್''ನ ಮೇಲೆ ಪ್ರವಚನ ನಡೆಯಿತು. ಮಕ್ಕಳು, ಹಿರಿಯರು ಎನ್ನದೆ ಪ್ರತಿನಿತ್ಯ ಅಧಿಕ ಸಂಖ್ಯೆಯಲ್ಲಿ ಆಸ್ತಿಕ ಬಾಂಧವರು ಪ್ರವಚನ ಶ್ರವಣದಲ್ಲಿ ಪಾಲ್ಗೊಂಡರು.

**ಸಾಮೂಹಿಕ ಸತ್ಯನಾರಾಯಣ ಪೂಜೆ**

ತಾ.3-5-2009 ಆದಿತ್ಯವಾರದಂದು ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಶಂಕರ ಜಯಂತಿಯನ್ನು ಆಚರಿಸಲಾಯಿತು. ಸಂಧ್ಯಾಕಾಲದಲ್ಲಿ ಪೂಜೆ ಆರಂಭಗೊಂಡಿತು. ಶಂಕರಾಚಾರ್ಯರ ಭಾವಚಿತ್ರಕ್ಕೆ ಆರತಿಗೈಯಲಾಯಿತು. ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಪ್ರವಚನ ಮುಗಿದ ಬಳಿಕ ಸಮಾಜ ಬಾಂಧವರಿಗೆ ಪ್ರಸಾದ ಭೋಜನ ನೀಡಲಾಯಿತು.

**ಸ್ವಾಮೀಜಿಗೆ ಭವ್ಯ ಸ್ವಾಗತ**

ತಾ.29-05-2009ರಂದು ಸಂಜೆ ಸುಬ್ರಹ್ಮಣ್ಯ ಸಭಾಕ್ಕೆ ಆಗಮಿಸಿದ ಸ್ವಾಮೀ ಬ್ರಹ್ಮಾನಂದಜೀಯವರನ್ನು ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಳ್ಳಲಾಯಿತು. ಬಳಿಕ ವೇದಿಕೆಯಲ್ಲಿ ಅತಿಥಿಗಳ ಸಮ್ಮುಖದಲ್ಲಿ ಪ್ರವಚನ ಸಪ್ತಾಹ ಉದ್ಘಾಟನೆಗೊಂಡಿತು.

**ಸಹಕಾರ ಸಂಘಕ್ಕೆ ಸ್ವಾಮೀಜಿ ಭೇಟಿ**

ಚಿನ್ಮಯ ಮಿಶನ್‌ನ ಸ್ವಾಮೀ ಬ್ರಹ್ಮಾನಂದಜೀಯವರು ಸುಬ್ರಹ್ಮಣ್ಯ ಸಹಕಾರ ಸಂಘಕ್ಕೆ ಭೇಟಿ ನೀಡಿ ಸಹಕಾರ ಸಂಘದ ಸಾಧನೆಗೆ ಮೆಚ್ಚುಗೆಯನ್ನು ಸೂಚಿಸಿದರು. ಅಲ್ಲದೆ ಮುಂದಿನ ವರ್ಷದಲ್ಲಿ ಅಧಿಕ ವ್ಯವಹಾರ ನಡೆದು ಶ್ರೇಯಸ್ಸು ಲಭಿಸಲಿ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಕರುಣ್ ರಾವ್ ಬೆಳ್ಳೆ, ಮಂಗಳೂರು ಸುಬ್ರಹ್ಮಣ್ಯ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಎಮ್.ಎಸ್. ರಘುನಾಥ ರಾವ್ ಮತ್ತು ಅನಿಲ್‌ರಾವ್ ಮುಂತಾದವರು ಉಪಸ್ಥಿತರಿದ್ದರು.

ವರದಿ : ನಾಗರಾಜ್ ವರ್ಕಾಡಿ

## ಜೋಗುಳಬೆಟ್ಟು ಕಾರ್ಕಳ, ಶ್ರೀರಾಮ ಧಾಮ-ಧ್ಯಾನಮಂದಿರ - ಪ್ರಥಮ ವಾರ್ಷಿಕೋತ್ಸವ

ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಂತೆ, ಬ್ರಹ್ಮಶ್ರೀ ಪಾವಂಜೆ ವಸಂತ ಶರ್ಮರ ಪೌರೋಹಿತ್ಯ ಸಾರಥ್ಯದಲ್ಲಿ ತಾ.31-03-2009ನೇ ಮಂಗಳವಾರ ಪ್ರಾರ್ಥನೆ, ಪುಣ್ಯಾಹ, ಕಂಕಣ ಬಂಧನ, ನಾಂದಿಗ್ರಹಣ, ನಂದಾದೀಪ ಪ್ರತಿಷ್ಠೆಯೊಂದಿಗೆ ಪೂರ್ವಾಹ್ನ 9 ಗಂಟೆಗೆ ಶ್ರೀರಾಮ ನವಮಿ ಆಚರಣೆಗೆ ಕೋಲ್ಪೆ ಗೋಪಾಲಕೃಷ್ಣ ರಾಯರು ಪತ್ನಿ ಶ್ರೀಮತಿ ಯಶೋದಾಳೊಂದಿಗೆ ಕಂಕಣಬದ್ಧರಾದರು. ಇದರ ಅಂಗವಾಗಿ ಶ್ರೀಮದ್ ವಾಲ್ಮೀಕಿ ರಾಮಾಯಣದ ನವಾಹ ಪಾರಾಯಣ, ಬ್ರಹ್ಮಶ್ರೀ ಸಾಂತೂರು ಸದಾಶಿವರಾಯರಿಂದ ಶುಭಾರಂಭಗೊಂಡಿತು. ಮಧ್ಯಾಹ್ನ ಪ್ರಸಾದ ಭೋಜನ ನೆರವೇರಿತು. ಸಂಜೆ ಗಂಟೆ 5ರಿಂದ ಶಾರದಾ ಭಜನಾ ಮಂಡಳಿ, ಅನಂತಶಯನ, ಕಾರ್ಕಳದವರಿಂದ ಭಜನಾ ಕಾರ್ಯಕ್ರಮ ನಡೆಯಿತು.

ತಾ.3-4-2009ರಂದು ಶ್ರೀರಾಮನವಮಿ ಆಚರಣೆ. ಅಂದು ಪ್ರಧಾನ ಅರ್ಚಕರಾಗಿ ಪಾವಂಜೆ ವಸಂತ ಶರ್ಮರು ''ಅಷ್ಟಾಕ್ಷರೀ ನಾರಾಯಣ ಹೋಮ'' ಹಾಗೂ ಶ್ರೀರಾಮನಿಗೆ ಸಹಸ್ರ ತುಳಸಿ ಅರ್ಚನೆ ಸಹಿತ ಮಹಾಪೂಜೆ ನಡೆಸಿದರು. ಪ್ರಸಾದ ಭೋಜನದ ಪ್ರಾರಂಭದಲ್ಲಿ ಆರು ವಟುಗಳಿಗೆ ಬ್ರಹ್ಮಚಾರಿ ಆರಾಧನೆ ನಡೆಯಿತು. ಮಧ್ಯಾಹ್ನ ಗಂಟೆ 3-30ರಿಂದ ಶ್ರೀ ನಾಗೇಶರಾವ್ ಬಾರ್ಕೂರು ಹಾಗೂ ಬಳಗದವರಿಂದ 'ರಾವಣವಧೆ-ಶ್ರೀರಾಮ ಪಟ್ಟಾಭಿಷೇಕ' ಎಂಬ ಪ್ರಸಂಗವನ್ನು ತಾಳ ಮದ್ದಳೆ ರೂಪದಲ್ಲಿ ಪ್ರಸ್ತುತ ಪಡಿಸಲಾಯಿತು.. ಅತಿಥಿ ಕಲಾವಿದರಾಗಿ ಕಡಬ ಸಚ್ಚಿದಾನಂದ ರಾವ್, ಸಾಂತೂರು ಸದಾಶಿವ ರಾಯರು ಹಾಗೂ ಮುಕ್ಕ ಉಮೇಶರಾಯರು ಸಹಕರಿಸಿದರು. ಸಂಜೆ ರಾಘವೇಂದ್ರ ಭಜನಾ ಮಂಡಳಿ, ತೆಳ್ಳಾರು ರಸ್ತೆ, ಕಾರ್ಕಳ ಇವರಿಂದ ಭಜನಾ ಕಾರ್ಯಕ್ರಮ ನಡೆಯಿತು.

ತಾ.4-4-2009ರಂದು ಬೆಳಿಗ್ಗೆ ಗಂಟೆ 10ರಿಂದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ಪ್ರಧಾನ ಅರ್ಚಕರಾಗಿ ''ಶ್ರೀ ಸೀತಾರಾಮ ಕಲ್ಯಾಣೋತ್ಸವ''ವನ್ನು ಪ್ರಾರಂಭಿಸಿದರು. ಇವರೊಂದಿಗೆ ಬ್ರಹ್ಮಶ್ರೀ ವಸಂತ ಶರ್ಮ ಹಾಗೂ ಶ್ರೀ ಕೃಷ್ಣರಾಜ ಭಟ್‌ರವರು ಸಹಕರಿಸಿದರು. ಶ್ರೀಮಾನ್ ಶುಂಠಿಪ್ಪಾಡಿ ಮನೋಹರ್‌ರಾವ್ ಹಾಗೂ ಅವರ ಶ್ರೀಮತಿ ಸಾವಿತ್ರಿಯಮ್ಮನವರು ಸೀತಾದೇವಿಯ ತಂದೆ-ತಾಯಿಯರ ಪಾತ್ರವಹಿಸಿ (ಜನಕರಾಜ ಸುನಯನಾದೇವಿ) ಮತ್ತು ಗೋಪಾಲಕೃಷ್ಣ ಕೋಲ್ಪೆಯವರು ಹಾಗೂ ಶ್ರೀಮತಿ ಯಶೋದಾ ಕೋಲ್ಪೆಯವರು ಶ್ರೀರಾಮನ ತಂದೆ ತಾಯಿಯರ ಪಾತ್ರಧಾರಿಗಳಾಗಿ (ದಶರಥಮಹಾರಾಜ-ಕೌಸಲ್ಯಾದೇವಿ) ಸೀತಾರಾಮರ ಕಲ್ಯಾಣವನ್ನು ವೈಭವೋಪೇತವಾಗಿ ನೆರವೇರಿಸಿದರು. ದಶರಥ ಮಹಾರಾಜನ ಪುರೋಹಿತ ವಸಿಷ್ಠರಾಗಿ ಬ್ರಹ್ಮಶ್ರೀ ವಸಂತ ಶರ್ಮರು, ಜನಕರಾಜನ ಪುರೋಹಿತ ವಾಮದೇವರಾಗಿ ಶ್ರೀ ಕೃಷ್ಣರಾಜ ಭಟ್ಟರು ಕಲ್ಯಾಣೋತ್ಸವವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲು ಸಹಕರಿಸಿದರು. ಇವರೆಲ್ಲರಿಗೂ ಅಧ್ವರ್ಯುರಾಗಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ಮಾರ್ಗದರ್ಶನವಿತ್ತರು.

ಅನಂತರ ಶ್ರೀ ಶಾರದಾ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮವಾಗಿ ಬ್ರಹ್ಮಶ್ರೀ ವಸಂತ ಶರ್ಮರಿಂದ ಮಹಾಪೂಜೆ ನೆರವೇರಿತು. ತದನಂತರ ಶ್ರೀ ಮನೋಹರ ರಾವ್ ದಂಪತಿಗಳಿಗೆ ದಂಪತಿ ಪೂಜೆ ನೆರವೇರಿಸಲಾಯಿತು. ಮಧ್ಯಾಹ್ನಕ್ಕೆ ಪ್ರಸಾದ ಭೋಜನವಿತ್ತು. ಸೀತಾರಾಮ ಕಲ್ಯಾಣಕ್ಕಾಗಿ ವಿಶೇಷ ಕಲ್ಯಾಣ ಮಂಟಪವನ್ನು ಕೋಲ್ಪೆ ವಿಠಲರಾಯರು ತಯಾರಿಸಿ ಅಲಂಕರಿಸಿದ್ದರು.

ಶ್ರೀ ರಾಮನವಮಿ ಉತ್ಸವದ ಅಂತಿಮ ದಿನವಾದ ತಾ.3-4-2009ರಂದು ಬೆಳಿಗ್ಗೆ 'ಶ್ರೀ ರಾಮ ತಾರಕ ಮಹಾಮಂತ್ರ ಹೋಮ'' ಬ್ರಹ್ಮಶ್ರೀ ವಸಂತಶರ್ಮರ ಪೌರೋಹಿತ್ಯ ಸಾರಥ್ಯದಲ್ಲಿ ಶಾಸ್ತ್ರೋಕ್ತವಾಗಿ ನಡೆದು ಸಂಪನ್ನಗೊಂಡಿತು. ತದನಂತರ ಬಹಳ ವಿಶೇಷವಾದ 'ಶ್ರೀರಾಮ ಪಟ್ಟಾಭಿಷೇಕ' ಮಹೋತ್ಸವವು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಬ್ರಹ್ಮಶ್ರೀ ವಸಂತ ಶರ್ಮ ಹಾಗೂ ಸಹಪುರೋಹಿತರ ಸಹಭಾಗಿತ್ವದಲ್ಲಿ ವಿಜೃಂಭಣೆಯಿಂದ ಪ್ರಾರಂಭಗೊಂಡಿತು. ಇದಕ್ಕಾಗಿ ವಿಶಿಷ್ಟವಾದ ತೂಗುಯ್ಯಾಲೆಯ ಮಂಟಪವನ್ನು ಶ್ರೀ ಕೋಲ್ಪೆ ವಿಠಲರಾಯರು ಸಿದ್ಧಪಡಿಸಿ ಅಲಂಕರಿಸಿದ್ದರು.

ಆಂಜನೇಯ ಲಕ್ಷ್ಮಣರ ಸಹಿತ ಸೀತಾರಾಮರ ಭವ್ಯ ಮೂರ್ತಿಗಳನ್ನು ಈ ತೂಗುಯ್ಯಾಲೆಯಲ್ಲಿ ಪ್ರತಿಷ್ಠಾಪಿಸಲಾಯ್ತು. ವಿಧಿವತ್ತಾಗಿ ಪಟ್ಟಾಭಿಷೇಕ ಕಾರ್ಯಕ್ರಮವು ಸಂಪನ್ನಗೊಂಡಿತು.

ಅನಂತರ ಇನ್ನೊಂದು ಮುಖ್ಯವಾದ ಕಾರ್ಯಕ್ರಮ-ಆಚಾರ್ಯ ಪೂಜೆ. ತಾ.31-3-2009ರಿಂದ 8-4-2009ರ ತನಕ

(3ನೇ ಪುಟಕ್ಕೆ ...)

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಘಟನೆ 1: ದೇವಾಲಯದಲ್ಲಿ ಸ್ವಾಮೀಜಿಯವರು ಆಗಮಿಸಿದ್ದು ಭಕ್ತಜನಸ್ತೋಮ ಗಡಿಬಿಡಿಯಲ್ಲಿದ್ದರು. ನಿಷ್ಠಾವಂತ ನೌಕರನೊಬ್ಬ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ತಿರುಗಾಡುತ್ತಾ ಬೇರೆ ಬೇರೆ ಕೆಲಸದಲ್ಲಿ ನಿರತನಾಗುತ್ತ ಮೈಮೇಲೆ ಪರಿವೆ ಇಲ್ಲದೆ, ಮೈಮೇಲಿರುವ ಉತ್ತರೀಯವು ಕೆಳಗೆ ಬೀಳುತ್ತದೆ ಎಂಬ ಉದ್ದೇಶದಿಂದ ಬಾಯಲ್ಲಿ ಕಚ್ಚಿಕೊಂಡು ಓಡಾಡುತ್ತಿದ್ದ. ದೂರದ ಊರಿನಿಂದ ಬಂದಿದ್ದ ಭಕ್ತನೊಬ್ಬ ಇದನ್ನು ಗಮನಿಸಿ 'ಅವರು ಯಾರು? ದೇವಾಲಯದೊಳಗೆ ಬಟ್ಟೆಕಚ್ಚಿಕೊಂಡು (ಎಂಜಲು) ತಿರುಗುತ್ತಿದ್ದಾರೆ? ಎಂದು ಆಕ್ಷೇಪಿಸಿದ್ದನು'

ಘಟನೆ 2 : ಅನೇಕ ಭಕ್ತರು ಸೇರಿದ್ದ ಒಂದು ಸಮಾರಂಭದಲ್ಲಿ ದೇವರ ಪೂಜೆಯ ಆರತಿ ತಟ್ಟೆಯನ್ನು ಸಭೆಗೆ ತೋರಿಸಿದಾಗ ಭಕ್ತರೆಲ್ಲರೂ ಕೈನೀಡಿ ಆರತಿ ತೆಗೆದುಕೊಂಡರು. ಎಲ್ಲರೂ ಆರತಿ ತೆಗೆದುಕೊಂಡ ನಂತರ ತಟ್ಟೆ ಹಿಡಿದುಕೊಂಡು ಬಂದಿದ್ದ ಆ ವ್ಯಕ್ತಿ ತಟ್ಟೆ ಕೆಳಗಿಟ್ಟು ಸ್ವತಃ ತಾನು ಆರತಿ ತೆಗೆದುಕೊಂಡು, ನಂತರ ಆರತಿಯ ಬತ್ತಿ-ದೀಪಗಳನ್ನು ಕೆಳಗೆ ಒಂದೆಡೆ ಹಾಕಿದರು. ಮುದಿ ಪ್ರಾಯದ ಗಣ್ಯರೊಬ್ಬರು ಆ ವ್ಯಕ್ತಿಯನ್ನು ಕರೆದು 'ನಿಮ್ಮ ಈ ವರ್ತನೆ ನನಗೆ ಸಂತೋಷ ನೀಡಿತು. ಎಲ್ಲರಿಗೂ ಆರತಿ ಕೊಟ್ಟು ನೀವು ತೆಗೆದುಕೊಂಡ ಈ ಕ್ರಮ ಬಹಳ ಒಳ್ಳೆಯ ನಡವಳಿಕೆ' ಎಂದು ಬೆನ್ನು ಚಪ್ಪರಿಸಿದರು.

ಘಟನೆ 3 : ಅಂಗಡಿಯ ಮುಂದೆ ಬಾಳೆ ಹಣ್ಣು ತಿನ್ನುತ್ತಿದ್ದ ವ್ಯಕ್ತಿಯೊಬ್ಬನನ್ನು ನೋಡಿ ಅಂಗಡಿಯಾತ -''ಬಾಳೆಹಣ್ಣು ಸುಲಿದು ನೇರವಾಗಿ ಬಾಯಿಗೆ ಇಟ್ಟು ತಿನ್ನುವುದಕ್ಕಿಂತಲೂ ಕೈಯಲ್ಲಿ ತುಂಡು ಮಾಡಿ ಬಾಯಿಗೆ ಇಟ್ಟು ತಿನ್ನುವುದು ಒಳ್ಳೆಯ ಸಂಸ್ಕೃತಿ. ಇಂತಹ ಸಂಸ್ಕೃತಿವಂತರು ಇರುವುದು ವಿರಳ'' ಎಂದು ಹೇಳಿದರು.

ಮೇಲಿನ ಘಟನೆಗಳಲ್ಲಿ ಸಂಸ್ಕೃತಿ, ಆಚರಣೆಗಳ ಬಗ್ಗೆ ತಿಳುವಳಿಕೆ ಹೇಗಿದೆ ಎಂದು ತಿಳಿಯಬಹುದು. ಮುಖ್ಯವಾಗಿ ಅವನ ಹುಟ್ಟು, ಮನೆಯ ವಾತಾವರಣ, ತಂದೆತಾಯಿಗಳ ನಡವಳಿಕೆ ಬಹಳ ಪ್ರಭಾವ ಬೀರುತ್ತದೆ. ಚಿಕ್ಕಂದಿನಿಂದ ಅಂತಹ ಸಂಸ್ಕೃತಿ ಮೈಗೂಡಿದರೆ ಮತ್ತೆ ಅದೇ ಅಭ್ಯಾಸ ನಮ್ಮಲ್ಲಿ ಮುಂದುವರಿಯುತ್ತದೆ.

ಅದೇನಿದ್ದರೂ ನಮ್ಮ ನಡವಳಿಕೆಯನ್ನು ನಮಗೆ ತಿಳಿಯದಂತೆ ಮತ್ತೊಬ್ಬ ನೋಡುತ್ತಿದ್ದಾನೆ ಎಂಬ ಪರಿವೆ ನಮಗಿರಬೇಕು. ನಮ್ಮ ಪ್ರತಿಯೊಂದು ತಪ್ಪು ನಡವಳಿಕೆಯೂ ಯಾರಾದರೊಬ್ಬರ ಕಣ್ಣಿಗೆ ಬಿದ್ದು, ಅದು ಜಗಜ್ಜಾಹೀರಾಗುತ್ತದೆ ಎಂಬ ಕಲ್ಪನೆ ನಮಗಿರಬೇಕು. ಆದ್ದರಿಂದ ಹೊರ ಪ್ರಪಂಚಕ್ಕೆ ಯಾವುದೇ ತಪ್ಪುಗಳು ಕಾಣದಂತೆ ನಮ್ಮ ನಡವಳಿಕೆ ಇರಬೇಕಾದುದು ಬಹಳ ಮುಖ್ಯವೆಂದು ವ್ಯಕ್ತಿ ತಿಳಿದಿರಬೇಕು.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



– ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಆ ದಿವ್ಯ ಶಿಶುವನ್ನು ನೋಡಿ ಅನಿರ್ವಚನೀಯ ಆನಂದವನ್ನು ಅನುಭವಿಸಿದರು. ನಂದನೂ ಆ ಶಿಶುವನ್ನು ತನ್ನದೆಂದೇ ಭಾವಿಸಿ ಪರಮಾಹ್ಲಾದ ನಿರ್ಭರನಾದನು. ಕೂಡಲೇ ಮಂಗಳಸ್ನಾನವನ್ನು ಮಾಡಿ ಹೊಸ ವಸ್ತ್ರಗಳನ್ನೂ ಆಭರಣಗಳನ್ನೂ ಧರಿಸಿದನು. ಬ್ರಾಹ್ಮಣರನ್ನು ಕರೆಯಿಸಿ ಸ್ವಸ್ತಿವಾಚನ ಪೂರ್ವಕ ಜಾತಕರ್ಮಸಂಸ್ಕಾರವನ್ನು ನೆರವೇರಿಸಿದನು. ಬ್ರಾಹ್ಮಣರಿಗೆ ವಸ್ತ್ರಾಭರಣಗಳನ್ನೂ, ಲಕ್ಷಾಂತರ ಗೋವುಗಳನ್ನು ದಾನ ಮಾಡಿದನು. ಬೆಟ್ಟದಂತಹ ಎಳ್ಳಿನ ಏಳು ರಾಶಿಗಳನ್ನು ಕೊಟ್ಟನು. ಧನಧಾನ್ಯಗಳು ಶುದ್ಧವಾಗುವುದು ದಾನದಿಂದ ತಾನೇ? ಆಗ ಬ್ರಾಹ್ಮಣರು, ಸೂತರು, ಮಾಗಧರು, ವಂದಿಗಳು ಮಂಗಳಾ ಶೀರ್ವಾದಗಳ ಮಳೆಗರೆದರು. ದಿವ್ಯ ರೂಪದ ಮಗುವಿನ ಸ್ತೋತ್ರ ಮಾಡಿದರು. ಗಾಯಕರು ಮಧುರವಾಗಿ ಹಾಡಿದರು. ವಾದಕರು ವಿವಿಧ ವಾದ್ಯಗಳನ್ನು ಬಾರಿಸಿದರು. ಊರ ಹೆಂಗಳೆಯರೆಲ್ಲ ತಂತಮ್ಮ ಮನೆಗಳಲ್ಲಿ ಮನೆ ಮುಂದಿನ ಬೀದಿಗಳಲ್ಲಿ ಗುಡಿಸಿ, ಸಾರಿಸಿ ರಂಗೋಲಿಯನ್ನಿಟ್ಟರು. ಮನೆ ಬಾಗಿಲುಗಳನ್ನು ತೋರಣಗಳಿಂದ ಅಲಂಕರಿಸಿದರು. ತಮ್ಮನ್ನೂ ಅಲಂಕರಿಸಿಕೊಂಡು ಸಂಭ್ರಮಿಸಿದರು. ಗೋವಳರು ತಂತಮ್ಮ ಎತ್ತು, ದನ, ಕರುಗಳಿಗೆ ಅರಸಿನದೆಣ್ಣೆ ಹಚ್ಚಿ, ವಿವಿಧ ಭೂಷಣಗಳಿಂದ ಸಿಂಗರಿಸಿದರು. ಗಂಡಸರು, ಹೆಂಗಸರು ಗುಂಪು ಗುಂಪಾಗಿ ನಂದನಮನೆಗೆ ಬಂದು ಆ ಅದ್ಭುತ ಶಿಶುವನ್ನು ಕಣ್ತುಂಬಾ ನೋಡಿ ತಮ್ಮ ಜನ್ಮ ಸಾರ್ಥಕವಾಯಿತು ಎಂದುಕೊಂಡರು. ಹಾಗೆ ಮನೆಗೆ ಬಂದವರನ್ನು ರೋಹಿಣಿಯೂ ಆದರಿಸಿ ಸತ್ಕರಿಸಿದಳು. ಬಂದವರೆಲ್ಲ ಆಕೆಯ ಮಗನನ್ನೂ ಬೆರಗಿನಿಂದ ನೋಡಿ ಆನಂದಿಸಿದರು. ಅಂತು ವ್ರಜದೇಶದಲ್ಲಿ ಸಂಭ್ರಮದ ಉತ್ಸವ ನಡೆಯಿತು.



ಹೀಗೆ ಸ್ವಲ್ಪ ಸಮಯ ಕಳೆಯಿತು. ನಂದನು ಕಂಸನಿಗೆ ವರ್ಷಕ್ಕೊಮ್ಮೆ ಕಪ್ಪ ಕಾಣಿಕೆಗಳನ್ನು ಒಪ್ಪಿಸಬೇಕಾದ ಕಾಲವೂ ಬಂತು. ಅವನು ಗೋಕುಲದ ರಕ್ಷಣೆಯ ಭಾರವನ್ನು ದಕ್ಷರಾದ ಗೋಪಾಲಕರಿಗೆ ವಹಿಸಿಕೊಟ್ಟು ಕೆಲವೇ ಆಪ್ತರೊಂದಿಗೆ ಎತ್ತಿನಗಾಡಿಗಳಲ್ಲಿ ಮಥುರೆಗೆ ಹೋದನು. ಕಂಸನಿಗೆ ಕಪ್ಪವನ್ನೊಪ್ಪಿಸಿ ದಣಿವಾರಿಸಿಕೊಳ್ಳಲು ಒಂದು ಬಿಡಾರದಲ್ಲಿ ಬೀಡುಬಿಟ್ಟನು. ನಂದನು ಮಥುರೆಗೆ ಬಂದ ಸುದ್ದಿ ವಸುದೇವನಿಗೆ ತಿಳಿಯಿತು. ಕೂಡಲೇ ತನ್ನ ಆಪ್ತ ಮಿತ್ರನನ್ನು ಕಂಡು ಮಾತಾಡಿಸಲು ಅವನ ಬಿಡಾರಕ್ಕೆ ಧಾವಿಸಿಹೋದನು. ವಸುದೇವನನ್ನು ನೋಡಿದ ನಂದನಿಗೆ ಅಮಿತಾನಂದವಾಯಿತು. ಇಬ್ಬರೂ ಪ್ರೇಮೋತ್ಕಟತೆಯಿಂದ ಆಲಿಂಗಿಸಿಕೊಂಡರು. ಪರಸ್ಪರ ಆರೋಗ್ಯ ಸಮೃದ್ಧಿಗಳ ವಿಚಾರಗಳನ್ನು ವಿನಿಮಯ ಮಾಡಿಕೊಂಡರು. ವಸುದೇವನು ನಂದನ (ನಿಜವಾಗಿಯೂ ತನ್ನ) ಇಬ್ಬರು ಮಕ್ಕಳ ಯೋಗಕ್ಷೇಮವನ್ನು ವಿಚಾರಿಸಿದನು. ಗೋಕುಲದಲ್ಲಿ ದುಷ್ಟರು ತೊಂದರೆಕೊಡಬಹುದೆಂದು ಅವನನ್ನು ಎಚ್ಚರಿಸಿ, ಹೆಚ್ಚುದಿನ ಮಥುರೆಯಲ್ಲಿ ನಿಲ್ಲಬಾರದೆಂದನು. ನಂದನೂ ಆ ಶಂಕೆಯಿಂದ ಗೋಕುಲಕ್ಕೆ ಹಿಂದಿರುಗಿ ಹೊರಟನು.

ಕಂಸನ ಅನುಚರರಲ್ಲಿ ಪೂತನಾ ಎಂಬೊಬ್ಬ ಘೋರ ರಾಕ್ಷಸಿಯಿದ್ದಳು. ಅವಳು ಒಂದು ವರ್ಷ ದೊಳಗಿನ ಮಕ್ಕಳನ್ನು ಸಿಕ್ಕಸಿಕ್ಕಲ್ಲಿ ಕೊಲ್ಲುತ್ತಾ ಗೋಕುಲಕ್ಕೆ ಬಂದಳು. ನಂದಗೋಪನ ಮನೆ ಯಲ್ಲೂ ಒಂದು ಮಗುವಿರುವುದನ್ನು ತಿಳಿದು ಅಲ್ಲಿಗೂ ಬಂದಳು. ರಕ್ಕಸಿಯ ವೇಷದಲ್ಲಿ ಹೋದರೆ ಅರಮನೆಯೊಳಗೆ ಯಾರೂ ಬಿಡ ಲಾರರೆಂದು ಒಬ್ಬ ಸುಂದರ ಗೋಪಸ್ತ್ರೀಯ ರೂಪತಾಳಿ ಯಶೋದಾನಂದನನನ್ನು ನೋಡಲು ಉತ್ಸುಕಳಾಗಿರುವಂತೆ ನಟಿಸುತ್ತಾ ಅರಮನೆಗೆ ಹೊಕ್ಕಳು. ಅವಳ ಸೌಂದರ್ಯಕ್ಕೆ ಮನಸೋತು ಯಾರೂ ಅವಳನ್ನು ಶಂಕಿಸಲಿಲ್ಲ. ಪೂತನೆಯು ಯಶೋದೆಯ ಮಗುವನ್ನೆತ್ತಿಕೊಂಡು ಮುದ್ದಿಸಿ ತನ್ನ ತೊಡೆಯ ಮೇಲೆ ಕೂರಿಸಿ ತನ್ನ ಮೊಲೆಯೂಡಿಸತೊಡಗಿದಳು. ಅವಳು ತನ್ನ ಮೊಲೆಗಳಿಗೆ ಅತಿಭಯಂಕರ ವಿಷವನ್ನು ಲೇಪಿಸಿಕೊಂಡಿದ್ದಳು. ಮೊಲೆಯನ್ನು ಚೀಪಿದೊಡನೆ ಮಗು ಸತ್ತೇಹೋಗಬೇಕೆಂಬುದು ಅವಳ ಹುನ್ನಾರ. ಆದರೆ ನಂದಾತ್ಮಜನು ಮಾಯಾ ವಿಗ್ರಹಧಾರಿ ಪರಮಾತ್ಮನೇ ತಾನೇ? ಈ ಮಾಯಾವಿನಿಯ ಮಾಯೆಯನ್ನು ಅರಿಯದಿರುವುದೆಂತು? ತನಗೆ ಹಾಲುಣಿಸಿದವಳು ರಾಕ್ಷಸಿಯೇ ಆದರೂ ಅವಳ ಹಾಲಿನ ಋಣವನ್ನು ತೀರಿಸಲೋಸುಗ ಅವಳಿಗೆ ಮೋಕ್ಷವನ್ನು ಕರುಣಿಸಲು ನಿಶ್ಚಯಿಸಿದನು. ಯಶೋದಾಕಂದನು ಹಾಲನ್ನು ಹೀರುತ್ತಾ ಹೀರುತ್ತಾ ಅವಳ ಪ್ರಾಣವನ್ನೇ ಹೀರಿಬಿಟ್ಟನು. ಪೂತನೆಯು ಭಯಂಕರವಾಗಿ ಗರ್ಜಿಸುತ್ತಾ ತನ್ನ ನಿಜರೂಪವನ್ನು ತಾಳಿ ದೊಡ್ಡ ಪರ್ವತದಂತೆ ನೆಲದ ಮೇಲೆ ಉರುಳಿದಳು. ನಂದನ ಅರಮನೆ ಮಾತ್ರವಲ್ಲ ಇಡಿ ವ್ರಜಭೂಮಿಯೇ ನಡುಗಿತು. ಎಲ್ಲರೂ ಓಡಿಬಂದು ಆ ರಾಕ್ಷಸಿಯ ಅದ್ಭುತ ದೇಹವನ್ನು ಕಂಡು ಶಿಶುವಿಗೇನು ಹಾನಿಯಾಯಿತೋ ಎಂದು ಭಯದಿಂದ ಕಂಪಿಸಿದರು. ಆದರೆ ಮಗು ಕಿಲಕಿಲನೆ ನಗುತ್ತ ಆ ಪರ್ವತಾಕಾರದ ದೇಹದ ಮೇಲೆ ಆಡುತ್ತಿರುವುದನ್ನು ಕಂಡು ಮೊದಲು ಬೆರಗುಪಟ್ಟರು, ಅನಂತರ ಸಮಾಧಾನದ ನಿಟ್ಟುಸಿರುಬಿಟ್ಟರು. ಯಶೋದೆಯು ಮಗುವನ್ನೆತ್ತಿಕೊಂಡು ದೃಷ್ಟಿತೆಗೆದಳು. ಅವನನ್ನು ಗೋಮೂತ್ರದಲ್ಲಿ ಸ್ನಾನಮಾಡಿಸಿ, ಗೋಧೂಳಿಯನ್ನು ಹಚ್ಚಿ, ಅವನ ಹನ್ನೆರಡು ಅಂಗಗಳಿಗೆ ಮಹಾವಿಷ್ಣುವಿನ ಕೇಶವಾದಿ ದ್ವಾದಶನಾಮಗಳಿಂದ ಗೋಮಯವನ್ನು ಹಚ್ಚಿ, ಶುದ್ಧ ನೀರಿನಿಂದ ಸ್ನಾನ ಮಾಡಿಸಿದಳು. ಗೋಪಿಯರೂ ಆಚಮನ

(3ನೇ ಪುಟಕ್ಕೆ ...)

## ಹೊಸ ಬೆಳಕು

**ನಲ್ನುಡಿ :**

**ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ ।**
**ತತ್ ತ್ವಂ ಪೂಷನ್ನಪಾವೃಣು ಸತ್ಯ ಧರ್ಮಾಯ ದೃಷ್ಟಯೇ ॥**

ಬಂಗಾರದ ತಳಿಗೆಯಿಂದ ಭಗವಂತನ ಮೋರೆ ಮುಚ್ಚಿದೆ. ಓ ಸೂರ್ಯ, ನೀನು ಆ ತೆರೆಯನ್ನು ಸರಿಸು. ಆ ಸತ್ಯಧರ್ಮದ ದೃಷ್ಟಿಯನ್ನು ಕರುಣಿಸು.

## ಪುಸ್ತಕ ಪರಿಚಯ :

**ಫಲ ಜ್ಯೋತಿಷ** (ಜಾತಕ ವಿಮರ್ಶೆಗೊಂದು ಮಾದರಿ ಪಠ್ಯ)
ಲೇಖಕರು : **ಸುಕುಮಾರ ಆಲಂಪಾಡಿ**

ಪುಸ್ತಕದ ಬೆನ್ನುಡಿಯಲ್ಲಿ ಸತ್ಯಮೂರ್ತಿ ಕೆ. ಮಂಗಲ್ಪಾಡಿಯವರು ಹೇಳಿದಂತೆ- ''ಕಾಸರಗೋಡಿನ ಪ್ರತಿಷ್ಠಿತ ಆಲಂಪಾಡಿ ಶ್ಯಾನುಭೋಗರ ಮನೆತನದವರಾದ ಸುಕುಮಾರ ಆಲಂಪಾಡಿ ಯವರು ವೃತ್ತಿಯಲ್ಲಿ ಕೃಷಿಕರು. ಸಾಹಿತ್ಯ, ಸಂಗೀತ, ಯಕ್ಷಗಾನ ಮತ್ತು ಜ್ಯೋತಿಷ ಇವರ ಆಸಕ್ತಿಯ ಕ್ಷೇತ್ರಗಳು. ವ್ಯಾಪಕವಾದ ಓದು, ಬಹುಭಾಷಾ ಜ್ಞಾನ ಮತ್ತು ವೈಚಾರಿಕ ದೃಷ್ಟಿಕೋನಗಳನ್ನು ಹೊಂದಿರುವ ಸುಕುಮಾರರು ಉತ್ತಮ ಲೇಖಕರೂ ಹೌದು. ಇವರು ವಿಭಿನ್ನ ವಿಷಯಗಳ ಕುರಿತು ಬರೆದಿರುವ ನೂರಾರು ಲೇಖನಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಕಳೆದ ಸುಮಾರು ಆರು ವರ್ಷಗಳಿಂದ- ಪ್ರತೀ ರವಿವಾರ ಗಡಿನಾಡು ಕಾಸರಗೋಡಿನ ಕನ್ನಡ ದೈನಿಕ 'ಕಾರವಲ್'ನಲ್ಲಿ ಸುಕುಮಾರರು ಬರೆಯುತ್ತಿರುವ ಜ್ಯೋತಿಷ ಸಂಬಂಧೀ ಲೇಖನಗಳ ಮೊದಲ ಭಾಗ ಇದೀಗ ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿದೆ. ಈ ಕೃತಿಯಲ್ಲಿ ಮನೋಜ್ಯೋತಿಷಿಕ ಆಯಾಮಗಳಿಂದ ಜ್ಯೋತಿಷದ 'ಜನೋಪಯೋಗೀ' ಮೌಲ್ಯವನ್ನು ಎತ್ತಿಹಿಡಿದಿದ್ದಾರೆ. ಈ ಕಾರಣಕ್ಕಾಗಿಯೇ ಜ್ಯೋತಿಷಕ್ಕೆ ಸಂಬಂಧಿಸಿ ಇದೊಂದು ವಿಶಿಷ್ಟ ಕೃತಿಯಾಗಿದೆ; ಮಾದರಿ ಪಠ್ಯವಾಗಿದೆ''.

ಲೇಖಕರು ಪ್ರಸ್ತಾವನೆಯಲ್ಲಿ ಹೇಳಿದಂತೆ- ''ಜ್ಯೋತಿಷ ಪೂರ್ಣವಾಗಿ ಭವಿಷ್ಯ ಸೂಚಕವಾಗಿಲ್ಲದಿದ್ದರೂ ಅದು ಮನುಷ್ಯರ ಸ್ವಭಾವ ವಿಶ್ಲೇಷಣೆಗೆ, ಸ್ವಭಾವ ತಿದ್ದುವಿಕೆಗೆ ಒಂದು ಉತ್ತಮ ಹಾದಿಯಾಗುತ್ತದೆ. "Astrology may not be a complete predictive science, but it is definitely a corrective science" ಎಂಬುದು ನನ್ನ ನಂಬಿಕೆ. ನಮ್ಮ ಸ್ವಭಾವವನ್ನು ನೈಪುಣ್ಯಗೊಳಿಸುವ ಸಾಧನವಾಗಿ ಜ್ಯೋತಿಷವನ್ನು ಉಪಯೋಗಿಸಿದರೆ ಅದು ಹೆಚ್ಚು ಉಪಯುಕ್ತವಾಗಬಲ್ಲದು. ಭವಿಷ್ಯ ಸೂಚನೆ ಎರಡನೇ ಚಿಂತನೆ ಮಾತ್ರ. ನಾನು ಸ್ವಯಂ ಜ್ಯೋತಿಷ ಕಲಿಯುತ್ತಿದ್ದಾಗ ಒಂದು ಪಠ್ಯ ಪುಸ್ತಕದ ಕೊರತೆಯನ್ನು ಮನಗಂಡಿದ್ದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದು ಈ ಪುಸ್ತಕದ ರಚನೆಯಾಗಿದೆ. ಉನ್ನತ ವ್ಯಾಸಂಗಗಳಿಗಾಗಿ ಇನ್ನೆರಡು ಪುಸ್ತಕಗಳನ್ನು ರಚಿಸಬೇಕೆಂಬ ಇರಾದೆಯಿದೆ.''

ಜ್ಯೋತಿಷದ ಕುರಿತು ವೈಜ್ಞಾನಿಕವಾಗಿ ಚಿಂತಿಸಿದರೆ ಜನ ಮೆಚ್ಚುತ್ತಾರೆ ಹಾಗೂ ಜ್ಯೋತಿಷದ ಸಹಾಯದಿಂದ ನಾವು ನಮ್ಮಲ್ಲಿರುವ ದೋಷ-ದೌರ್ಬಲ್ಯಗಳನ್ನು ಮೀರಿ ನಮ್ಮ ವ್ಯಕ್ತಿತ್ವವನ್ನು ವಿಕಾಸಗೊಳಿಸಬಹುದು ಎಂದೆನ್ನುವ ಸುಕುಮಾರರ ಈ ಕೃತಿ ದ್ವಿತೀಯ ಆವೃತ್ತಿಯನ್ನು ಕಂಡಿದೆ.

ಪ್ರಕಾಶನ : ಸುಜೀವ ಪ್ರಕಾಶನ, 'ವೆಂಕಟೇಶ', ಎಸ್.ವಿ.ಟಿ.ರಸ್ತೆ, ಕಾಸರಗೋಡು **- 671 121.**

ಪ್ರತಿಗಳು ದೊರಕುವ ಸ್ಥಳ : ಸಾಹಿತ್ಯ ಕೇಂದ್ರ, ಪಿ.ಎಮ್.ರಾವ್ ರಸ್ತೆ, ಹಂಪನಕಟ್ಟೆ, ಮಂಗಳೂರು**-575 001.**

ಬೆಲೆ : **120/-**

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ.

## ಜೋಗುಳಬೆಟ್ಟು ಕಾರ್ಕಳ ಶ್ರೀರಾಮ ಧಾಮ-ಧ್ಯಾನಮಂದಿರ - ಪ್ರಥಮ ವಾರ್ಷಿಕೋತ್ಸವ

(...1ನೇ ಪುಟದಿಂದ)

ಪ್ರತಿದಿನ ವಾಲ್ಮೀಕಿ ರಾಮಾಯಣ- ನವಾಹ ಪಾರಾಯಣ (24000 ಶ್ಲೋಕಗಳು) ಗೈದ ಬ್ರಹ್ಮಶ್ರೀ ಸಾಂತೂರು ಸದಾಶಿವ ರಾಯರನ್ನು ಆಚಾರ್ಯಪೂಜೆ ಮುಖಾಂತರ ಗೌರವಿಸಲಾಯಿತು. ಅನಂತರ ಬ್ರಹ್ಮಶ್ರೀ ವಸಂತ ಶರ್ಮರು ಮಹಾಪೂಜೆ ನೆರವೇರಿಸಿದರು, ಅಷ್ಟಾವಧಾನ ಸೇವೆಯಲ್ಲಿ ಪುರೋಹಿತ ವರ್ಗದವರೆಲ್ಲ ಸಹಕರಿಸಿದರು. ಸಂಗೀತ ಸೇವೆಯಲ್ಲಿ ಶ್ರೀಮತಿ ಯಶೋದಾ ಕೋಲ್ಪೆಯವರು ''ಚಲಮೇಲರಾ ಸಾಕೇತ ರಾಮ'' ಎಂಬ ತ್ಯಾಗರಾಜರ ಕೀರ್ತನೆಯನ್ನು ಸುಶ್ರಾವ್ಯವಾಗಿ ಹಾಡಿದರು. ಕಾರ್ಕಳ ಶ್ರೀಮತಿ ಸಂಧ್ಯಾರಾವ್ ಅರವಿಂದ ರಾವ್ ದಂಪತಿಗಳ ಪುತ್ರಿ ಕು| ಶಮಾರಾವ್ ಸುಂದರವಾಗಿ ಭರತನಾಟ್ಯ ಸೇವೆಗೈದು ಎಲ್ಲರ ಮೆಚ್ಚುಗೆಗೆ ಪಾತ್ರಳಾದಳು. ಮುಂದಕ್ಕೆ ಅವಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷರಾಗಿ ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್‌ರಾವ್ ಬೆಳ್ಳೆಯವರು, ಪ್ರವಚನಕಾರರಾಗಿ ಶ್ರೀ ಎಮ್. ರಘುರಾಮ ಶರ್ಮ, ಮುಖ್ಯ ಅತಿಥಿಗಳಾಗಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರೀ ಹಾಗೂ ಬ್ರಹ್ಮಶ್ರೀ ಸಾಂತೂರು ಸದಾಶಿವರಾಯರು ಆಸನ ಸ್ವೀಕರಿಸಿದರು. ಪ್ರಾರ್ಥನೆಯ ನಂತರ ಕೋಲ್ಪೆ ಗೋಪಾಲಕೃಷ್ಣರಾಯರು, ಮಂದಿರದ ಮುಖ್ಯಸ್ಥ ಶಶಿಧರ ಕೋಲ್ಪೆಯವರ ಮುಖಾಂತರ ಗುಲಾಬಿ ಹೂವನ್ನಿತ್ತು ಗಣ್ಯರನ್ನು ವೇದಿಕೆಗೆ ಬರಮಾಡಿಕೊಂಡು ರಾಮನವಮಿ ಉತ್ಸವದ 9 ದಿನಗಳ ವರದಿಯನ್ನು ಓದಿದರು. ಪ್ರವಚನಕಾರ ಶ್ರೀ ರಘುರಾಮ ಶರ್ಮರು ಶ್ರೀರಾಮ ನವಮಿ ಆಚರಣೆ ಬಗ್ಗೆ ವಿವರವಾಗಿ ಮಾತನಾಡಿ ಶ್ರೀರಾಮಚಂದ್ರನ ಆದರ್ಶಗಳನ್ನು ಉದಾಹರಿಸಿದರು. ಅಲ್ಲದೆ, ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇದಸೆ, ರಘುನಾಥಾಯ ನಾಥಾಯ ಸೀತಾಯ ಪತಯೇ ನಮಃ'' ಎಂಬ ಶ್ಲೋಕವನ್ನು ಆಧರಿಸಿ, ಋಷಿ-ಮುನಿಗಳಾದಿಯಾಗಿ, ಅವನ ಬಂಧು-ಬಳಗ, ಪ್ರಜೆಗಳು, ಯಾವರೀತಿ ಅವನನ್ನು ಸಂಬೋಧಿಸುತ್ತಿದ್ದರೆಂದು ವರ್ಣಿಸಿದರು. ಮುಖ್ಯ ಅತಿಥಿಯಾಗಿ ಬ್ರಹ್ಮಶ್ರೀ ಸಾಂತೂರು ಸದಾಶಿವರಾಯರು, ರಾಮಾಯಣ ಪಾರಾಯಣದ ಅವಶ್ಯಕತೆಯನ್ನು ವಿವರಿಸುತ್ತಾ, ಸಮಾಜದ ಏಳಿಗೆಗಾಗಿ, ಸಂಸ್ಕೃತಿಯ ಉಳಿವಿಗಾಗಿ ಬ್ರಾಹ್ಮಣ ಸಮಾಜ ಶ್ರಮಿಸಬೇಕೆಂದು ಕರೆಯಿತ್ತರು ಹಾಗೂ ಈ ಶ್ರೀರಾಮ ಧಾಮದಲ್ಲಿ ನಡೆದ ನವಾಹ ಪಾರಾಯಣ ಹಾಗೂ ಇತರ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಆಶೀರ್ವದಿಸಿದರು. ಇನ್ನೋರ್ವ ಮುಖ್ಯ ಅತಿಥಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ಮಾತನಾಡಿ, ವಿದ್ವಾಂಸರೋರ್ವರಿಂದ ಮಾಹಿತಿ ಪಡೆದು ಇಲ್ಲಿಯ ಕಾರ್ಯಕ್ರಮಗಳನ್ನು ರೂಪಿಸಿ ಎಲ್ಲಾ ಪುರೋಹಿತರ ಸಹಕಾರದೊಂದಿಗೆ ಪ್ರಸ್ತುತಪಡಿಸಿದ್ದು ಹೊರತು ತನ್ನ ಮಾರ್ಗದರ್ಶನವೇನೂ ಇಲ್ಲ, ಎಲ್ಲಾ ಶ್ರೀರಾಮನ ದಯೆ ಮತ್ತು ಕೋಲ್ಪೆ ಕುಟುಂಬದವರ ಪರಿಶ್ರಮದ ಫಲ ಎಂದು ಹೇಳಿ ವಿನೀತರಾಗಿ ಆಶೀರ್ವಚಿಸಿದರು.

ಅಧ್ಯಕ್ಷೀಯ ಭಾಷಣಗೈಯುತ್ತಾ, ಶ್ರೀ ಕರುಣ್‌ರಾವ್ ಬೆಳ್ಳೆಯವರು ಸಮಾರಂಭದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ತಾನೊಬ್ಬ ಸಮಾಜದ ನಮ್ರ ಸೇವಕ ಹಾಗೂ ಪ್ರತಿಯೊಬ್ಬರ ಸಹಕಾರದ ಫಲವೇ ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ಈಗಿನ ಬೆಳವಣಿಗೆಗೆ ಕಾರಣ ಎಂದು ಹೇಳಿದರು. ಕೋಲ್ಪೆ ಗೋಪಾಲಕೃಷ್ಣ ರಾಯರು ಸಂಗ್ರಹಿಸಿದ (ಕಡಬ ಕುಂಭಾಟ್ ಗೋಪಾಲ ರಾವ್, ಬಿಳಿನೆಲೆಯವರ ಮುನ್ನುಡಿಯೊಂದಿಗೆ) ಕೋಲ್ಪೆ ಕೊಡಂಗೆ ಮನೆತನದ 'ವಂಶವಾಹಿನಿ' ಯನ್ನು ಬಿಡುಗಡೆಗೊಳಿಸಿದರು. ಅನಂತರ ವೇದಿಕೆಯ ಮೇಲಿನ ಗಣ್ಯರನ್ನು ಹಾಗೂ ಪುರೋಹಿತರನ್ನು ಶಾಲುಹೊದಿಸಿ, ಫಲತಾಂಬೂಲ ಹಾಗೂ ಫಲಕವನ್ನಿತ್ತು ಗೌರವಿಸಿದರು. ಈ ಕಾರ್ಯಕ್ರಮವನ್ನು ಭಾಸ್ಕರರಾವ್ ಕೋಲ್ಪೆ, ಬೆಂಗಳೂರು ಇವರು ತಮ್ಮ ಶಶಿಧರ ಕೋಲ್ಪೆಯವರೊಂದಿಗೆ ನೆರವೇರಿಸಿದ್ದರು. ಗೋಪಾಲಕೃಷ್ಣ ಕೋಲ್ಪೆ ಯವರ ವಂದನಾರ್ಪಣೆಯೊಂದಿಗೆ ಸಭಾ ಕಾರ್ಯಕ್ರಮ ಮುಕ್ತಾಯವಾಯಿತು.

ಅನಂತರ ಶ್ರೀರಾಮಚಂದ್ರ ಪರಿವಾರದ ಸಣ್ಣ ವಿಗ್ರಹದೊಂದಿಗೆ, ವಾಲ್ಮೀಕಿ ರಾಮಾಯಣ ಪಾರಾಯಣದ ಎಲ್ಲಾ ಗ್ರಂಥಗಳನ್ನು ಕುಟುಂಬದವರೆಲ್ಲಾ ಹೊತ್ತುಕೊಂಡು ಶೋಭಾಯಾತ್ರೆಯಲ್ಲಿ ಪಾಲ್ಗೊಂಡರು. ವಾಲಗ, ಜಾಗಟೆ, ಶಂಖ, ಚೆಂಡೆ, ಪಟಾಕಿ-ಗರ್ನಾಲು ಶಬ್ದಗಳೊಂದಿಗೆ ಮಂದಿರದಿಂದ ಸುಮಾರು ಅರ್ಧ ಕಿ.ಮೀ. ದೂರವಿರುವ 'ಗಡಿಬಿಡಿ ಸಾರ್' (ನೀರಿನ ತೊರೆ) ಹತ್ತಿರವಿರುವ ಮಂಟಪಕ್ಕೆ ವಿಗ್ರಹ ಸಾಗೂ ಪುಸ್ತಕಗಳನ್ನು ಕೊಂಡೊಯ್ದು ಅಲ್ಲಿ ಪೂಜಿಸಿ ಹಿಂದಕ್ಕೆ ತರಲಾಯಿತು. ಯಥಾಸ್ಥಾನ ದಲ್ಲಿ ವಿಗ್ರಹವನ್ನು ಇಟ್ಟು ಪುನಃ ಪೂಜೆಗೈಯಲಾಯಿತು. ಭೋಜನಾ ನಂತರ ಪುರೋಹಿತರು ಕುಟುಂಬದವರನ್ನು ಹರಸಿ, ಮಂತ್ರಾಕ್ಷತೆ ನೀಡಿದರು.

ಇದೊಂದು ಅಪರೂಪದ ಶ್ರೀ ರಾಮ ನವಮಿ ಉತ್ಸವ. ಇನ್ನೂ ಹೆಚ್ಚಿನ ವೈಭವದೊಂದಿಗೆ ಶ್ರೀರಾಮನವಮಿ ನಡೆಯುತ್ತಿರಲಿ.

**ವರದಿ : ಜಿ.ಕೆ.ಕೋಲ್ಪೆ ಕಡಬ**

## ಶ್ರೀ ಕೃಷ್ಣಾಯನ (ಶ್ರೀ ಮದ್ಭಾಗವತಾನುಸಾರಿ)

(....2ನೇ ಪುಟದಿಂದ)

ಪೂರ್ವಕ ಬೀಜಮಂತ್ರಗಳಿಂದ ಕರನ್ಯಾಸ, ಅಂಗನ್ಯಾಸಗಳನ್ನು ಮಾಡಿಕೊಂಡು ಶಿಶುವಿಗೂ ಮಾಡಿದರು. ಹಾಗೇ ಅಜಾದಿ ಮಂತ್ರಗಳಿಂದ ಕವಚವನ್ನೂ ಹೇಳಿದರು. ಯಶೋದೆಯು ಮಗುವಿಗೆ ಹಾಲೂಡಿಸಿ ತೊಟ್ಟಿಲಲ್ಲಿ ಮಲಗಿಸಿದಳು. ಅಷ್ಟರಲ್ಲಿ ಮಥುರೆಗೆ ಹೋಗಿದ್ದ ನಂದನು ಮನೆಗೆ ಬಂದನು. ಅಂಗಳದಲ್ಲಿ ಬಿದ್ದಿದ್ದ ಬೃಹದಾಕಾರದ ಪೂತನೆಯ ಶವವನ್ನು ಕಂಡು ಬೆಚ್ಚಿದನು. ವಿಷಯವನ್ನು ತಿಳಿದು ವಸುದೇವನು ಎಚ್ಚರಿಸಿದಂತೆ ನಡೆಯುವುದನ್ನು ನೋಡಿ ಸೋಜಿಗಪಟ್ಟನು. ಆಗ ವ್ರಜ ವಾಸಿಗಳು ಕೊಡಲಿಗಳಿಂದ ಪೂತನೆಯ ದೇಹವನ್ನು ತುಂಡು ತುಂಡು ಮಾಡಿ ದೂರದ ಸ್ಥಳಕ್ಕೆ ಸಾಗಿಸಿ ಚಿತೆಯ ಮೇಲಿಟ್ಟು ಸುಟ್ಟರು. ಅವಳ ಶರೀರ ಸುಡುವಾಗ ವಿಲಕ್ಷಣ ಸುಗಂಧವು ಎಲ್ಲೆಡೆ ಹರಡಿತು. ಭಗವಂತನ ಮಹಿಮೆಯನ್ನು ಅರಿಯದುದರಿಂದ ಎಲ್ಲರೂ ಆಶ್ಚರ್ಯ ಚಕಿತರಾದರು.

ಮೂರು ತಿಂಗಳಾಗುತ್ತಲೆ ಮುಕುಂದನು ಬೋರಲುಬಿದ್ದನು. ಆ ದಿನ ರೋಹಿಣಿ ನಕ್ಷತ್ರವಿತ್ತು. ಅದೊಂದು ಹಬ್ಬಕ್ಕೆ ಕಾರಣವಾಯಿತು. ಊರೆಲ್ಲ ಮಗು ಬೋರಲು ಬಿದ್ದ ಸುದ್ದಿ ಹಬ್ಬಿತು. ವ್ರಜವಾಸಿ ಬ್ರಾಹ್ಮಣರು, ಸುವಾಸಿನಿಯರು ಬಂದು ಮಗುವಿಗೆ ಆಶೀರ್ವಾದ ಮಾಡಿದರು. ಯಶೋದೆ ತನ್ನ ಪುಟ್ಟನಿಗೆ ಮಂಗಳ ಸ್ನಾನ ಮಾಡಿಸಿ ಹಾಲುಣಿಸಿದಳು. ಮಗು ಆಕಳಿಸತೊಡಗಿದ್ದರಿಂದ ಒಂದು ತೊಟ್ಟಿಲಲ್ಲಿ ಮಲಗಿಸಿ ಒಂದು ಸುಂದರ ಗಾಡಿಯ ಕೆಳಗೆ ತೊಟ್ಟಿಲನ್ನಿಟ್ಟಳು. ಮನೆಗೆ ಬಂದ ಬ್ರಾಹ್ಮಣರನ್ನು ಸತ್ಕರಿಸಿ ಅವರಿಂದ ಸ್ವಸ್ತಿವಾಚನ ಹೇಳಿಸಿದಳು. ಇತರ ಮಹಿಳೆಯರನ್ನು ಆದರಿಸಿ ಸತ್ಕರಿಸಿದಳು. ಅಷ್ಟರಲ್ಲಿ ತೊಟ್ಟಿಲಲ್ಲಿ ಮಲಗಿದ್ದ ನಂದಕಂದನು ಎಚ್ಚೆತ್ತು ಅಳತೊಡಗಿದನು. ಆದರೆ ಬಂದ ಅತಿಥಿಗಳನ್ನು ಸತ್ಕರಿಸುವುದರಲ್ಲಿ ಮಗ್ನಳಾಗಿದ್ದ ಯಶೋದೆಗೆ ಮಗುವಿನ ಅಳು ಕೇಳಿಸಲಿಲ್ಲ. ಬಾಲಕನು ಜೋರಾಗಿ ಅಳುತ್ತ ಕೈಕಾಲು ಬಡಿಯಲಾರಂಭಿಸಿದನು. ಆಗ ಅವನ ಪಾದ ಗಾಡಿಗೆ ತಾಕಿತು. ಗಾಡಿ ಸ್ವಲ್ಪ ದೂರ ಹೋಗಿ ಅಡಿಮೇಲಾಗಿ ಬಿತ್ತು. ಅದರಲ್ಲಿಟ್ಟಿದ್ದ ಹಾಲು, ಮೊಸರು, ಮೊದಲಾದ ಪದಾರ್ಥಗಳು ನೆಲದ ಮೇಲೆ ಚೆಲ್ಲಾಡಿದವು. ಬಂಡಿಯ ಅಂಗಾಂಗಳು ನುಚ್ಚು ನೂರಾದವು. ಯಶೊದೆ, ರೋಹಿಣಿ, ನಂದಗೋಪ ಮತ್ತಿತರ ಜನರು ಗಾಡಿ ಮುರಿದು ಬಿದ್ದದ್ದು ಹೇಗೆಂಬುದನ್ನು ತಿಳಿಯದೆ ಆಶ್ಚರ್ಯಗೊಂಡರು. ಗೊಲ್ಲರ ಹುಡುಗರು ಮಗುವಿನ ಕಾಲು ತಾಕಿ ಗಾಡಿ ಬಿತ್ತೆಂದರು. ಅದು ಹುಡುಗರ ಮಾತೆಂದು ಯಾರೂ ನಂಬಲಿಲ್ಲ. ನಂದನು ಬ್ರಾಹ್ಮಣರಿಂದ ಹೋಮ-ಹವನಗಳನ್ನು ಮಾಡಿಸಿದನು. ಗೋವಳರು ಗಾಡಿಯನ್ನು ಮೊದಲಿನಂತೆ ಸರಿಪಡಿಸಿದರು. ನಿಜವಾದ ಕಥೆಯೆಂದರೆ ಆ ಬಂಡಿ ಒಬ್ಬ ರಾಕ್ಷಸನೇ ಆಗಿದ್ದ. ಅವನ ಹೆಸರು ಶಕಟಾಸುರ. ಅವನು ಪೂರ್ವಜನ್ಮದಲ್ಲಿ ಹಿರಣ್ಯಾಕ್ಷನ ಮಗನಾಗಿದ್ದನು. ಆಗ ಅವನ ಹೆಸರು ಉತ್ಕಚ. ಲೋಮಶಮಹರ್ಷಿಗಳ ಶಾಪದಿಂದ ಶಕಟಾಸುರನಾಗಿದ್ದನು. ಬಾಲ ಮುಕುಂದನ ಪಾದಸ್ಪರ್ಶದಿಂದ ಶಾಪಮುಕ್ತನಾದ.

ಇನ್ನೊಮ್ಮೆ ಕಂಸನ ಅನುಯಾಯಿಗಳಲ್ಲೊಬ್ಬನಾದ ತೃಣಾವರ್ತನೆಂಬ ರಾಕ್ಷಸನು ಸುಂಟರಗಾಳಿಯ ರೂಪದಿಂದ ಬಂದು ಬಾಲಕನನ್ನು ಆಕಾಶಕ್ಕೆ ಹಾರಿಸಿಕೊಂಡು ಹೋದನು. ಸುಂಟರಗಾಳಿಯಿಂದಾಗಿ ಇಡೀ ಗೋಕುಲ ಧೂಳಿನಿಂದ ತುಂಬಿ ಹೋಯಿತು. ಯಶೋದೆಯು ತನ್ನ ಮಗುವನ್ನು ಕಾಣದೆ ಕರುವನ್ನು ಕಳೆದುಕೊಂಡ ಹಸುವಿನಂತೆ ನೆಲಕ್ಕೆ ಬಿದ್ದು ರೋದಿಸಿದಳು. ಅಷ್ಟರಲ್ಲಿ ಗಾಳಿಯಲ್ಲಿ ಹಾರುತ್ತಿದ್ದ ಬಾಲ ಮುಕುಂದನು ಅತಿಭಾರವಾಗುತ್ತಾ ಹೋದನು. ಅವನೆಷ್ಟು ಭಾರವಾದನೆಂದರೆ ರಾಕ್ಷಸನಿಗೆ ಆ ಭಾರವನ್ನು ಹೊರಲು ಸಾಧ್ಯವಾಗಲಿಲ್ಲ. ಬಾಲಕನು ಅವನ ಕತ್ತನ್ನು ಬಿಗಿಯಾಗಿ ಹಿಡಿದುಕೊಂಡಿದ್ದುದರಿಂದ ಅವನನ್ನು ಕೆಳಗೆ ಬೀಳಿಸಲಾಗಲಿಲ್ಲ. ಅವನು ಉಸಿರುಗಟ್ಟಿ ಸತ್ತು ಕೆಳಕ್ಕೆ ಬಿದ್ದನು. ಬಾಲನು ರಾಕ್ಷಸನ ಮೈಮೇಲೆಯೇ ಇದ್ದುದರಿಂದ ಅವನಿಗೆ ಏಟಾಗಲಿಲ್ಲ. ಆದರೆ ದೈತ್ಯನು ಒಂದು ಬಂಡೆಯ ಮೇಲೆ ಬಿದ್ದುದರಿಂದ ಅವನ ಮೈ ಪುಡಿ ಪುಡಿಯಾಯಿತು. ಗೋಪಿಯರು ಸುರಕ್ಷಿತವಾಗಿದ್ದ ಮಗುವನ್ನು ಎತ್ತಿಕೊಂಡು ಬಂದು ಅಳುತ್ತಿದ್ದ ಯಶೋದೆಗೆ ಕೊಟ್ಟರು. ಎಲ್ಲರೂ ಆನಂದ ಭರಿತರಾದರು. ತಮ್ಮ ಪೂರ್ವಜನ್ಮದ ಪುಣ್ಯದ ಫಲದಿಂದಲೇ ಮಗು ಸುರಕ್ಷಿತವಾಗಿದೆ ಎಂದು ನಂದ-ಯಶೋದೆಯರು ಭಾವಿಸಿದರು. ಬಾಲಕನು ಭಗವದವತಾರವೆಂದು ತಿಳಿಯಲೇ ಇಲ್ಲ.

ಈ ತೃಣಾವರ್ತನೂ ಶಾಪಗ್ರಸ್ತ ರಾಜನಾಗಿದ್ದನು. ಅವನ ಹೆಸರು ಸಹಸ್ರಾಕ್ಷ. ಒಮ್ಮೆ ಅವನು ದುರ್ವಾಸರನ್ನು ಆದರಿಸದೆ ಅವಮಾನಿಸಿ ಅವರ ಶಾಪಕ್ಕೊಳಗಾದನು. ಈಗ ಭಗವಂತನ ಸ್ಪರ್ಶದಿಂದ ಶಾಪಮುಕ್ತನಾಗಿದ್ದನು.


ಮತ್ತೊಂದು ಸಲ ಮಗು ಆಕಳಿಸುವಾಗ ಯಶೋದೆಗೆ ಅಲ್ಲಿ ಬ್ರಹ್ಮಾಂಡವೇ ಕಾಣಿಸಿತು. ಆದರೂ ಅದು ತನ್ನ ಭ್ರಮೆಯೆಂದುಕೊಂಡಳೇ ಹೊರತು ಬಾಲಕನ ದಿವ್ಯ ಮಹಿಮೆಯನ್ನು ಅರಿಯಲಿಲ್ಲ.

ಆ ಕಾಲದಲ್ಲಿ ಗರ್ಗರೆಂಬ ತಪೋಧನರಿದ್ದರು. ಯದುವಂಶೀಯರಿಗೆ ಅವರೇ ಪುರೋಹಿತರು. ವಸುದೇವನು ಅವರನ್ನು ನಂದಗೋಕುಲಕ್ಕೆ ಕಳುಹಿಸಿಕೊಟ್ಟನು. ಮಹರ್ಷಿಗಳನ್ನು ಕಂಡು ನಂದನು ತಾನು ಧನ್ಯನಾದುದಾಗಿ ತಿಳಿದನು. ಪರಮಾದರದಿಂದ ಅವರನ್ನು ಯಥೋಚಿತ ಪೂಜಿಸಿ ಬೇಡಿಕೊಂಡನು, ''ನನ್ನ ಇಬ್ಬರು ಮಕ್ಕಳಿಗೆ ನೀವೇ ನಾಮಕರಣ ಸಂಸ್ಕಾರವನ್ನು ನೆರವೇರಿಸಿ ಕೊಡಬೇಕು. ಅದರಿಂದ ಮಕ್ಕಳಿಗೆ ಮತ್ತು ನಮಗೆ ಶ್ರೇಯಸ್ಸುಂಟಾಗುವುದರಲ್ಲಿ ಸಂಶಯವಿಲ್ಲ''. ಗರ್ಗರೆಂದರು, ''ನಾನು ಯದುಕುಲದ ಕುಲಾಚಾರ್ಯನೆಂಬುದು ಕಂಸನಿಗೆ ಗೊತ್ತಿದೆ. ನಿನಗೂ, ವಸುದೇವನಿಗೂ ಆಪ್ತ ಸ್ನೇಹವಿರುವುದನ್ನು ಅವನು ಬಲ್ಲ. ಆದುದರಿಂದ ಮಕ್ಕಳ ನಾಮಕರಣವನ್ನು ನಾನು ನೆರವೇರಿಸಿದರೆ ಅವನಿಗೆ ಸಂದೇಹವುಂಟಾಗಬಹುದು. ನಿನ್ನ ಮಗನು ದೇವಕಿಯ ಮಗನೆಂದೇ ತಿಳಿದು ಮಗುವಿಗೆ ಹಾನಿಯನ್ನುಂಟು ಮಾಡಬಹುದು. ನಾವಾಗಿಯೇ ಏಕೆ ಅಪಾಯಕ್ಕೆ ಆಹ್ವಾನವನ್ನು ಕೊಡುವುದು?'' ಆಗ ನಂದನು ಹೇಳಿದನು, ''ಪೂಜ್ಯರೆ, ನಮ್ಮ ಹಟ್ಟಿಯಲ್ಲಿ ಗುಟ್ಟಾಗಿ ಸಂಸ್ಕಾರವನ್ನು ನಡೆಸಿರಿ. ನನ್ನ ಬಂಧು ಬಾಂಧವರಿಗೂ ಈ ವಿಷಯ ತಿಳಿಯದಂತೆ ಜಾಗರೂಕತೆ ವಹಿಸುತ್ತೇನೆ.'' ಗರ್ಗರು ಇದಕ್ಕೊಪ್ಪಿ ಗುಪ್ತವಾಗಿ ನಂದನ ಮಗನಿಗೂ, ರೋಹಿಣಿಯ ಮಗನಿಗೂ ನಾಮಕರಣವನ್ನು ಮಾಡಿದರು. ಗರ್ಗರು ನಂದಕುಮಾರನನ್ನು ನೋಡಿ ಹೇಳಿದರು ''ಇವನು ಅಂತಿಂತವನಲ್ಲ. ಇವನು ಒಂದೊಂದು ಯುಗದಲ್ಲೂ ಒಂದೊಂದು ಬಣ್ಣ ತಾಳುವವನು. ಕೃತದಲ್ಲಿ ಬೆಳ್ಳಗೂ, ತ್ರೇತಾದಲ್ಲಿ ಕೆಂಪೂ, ದ್ವಾಪರದ ಪೂರ್ವಾರ್ಧದಲ್ಲಿ ಹಳದಿಯೂ, ಕೊನೆಯಲ್ಲಿ ಕಪ್ಪೂ ಆಗಿರುವನು. ಇವನಿಗೆ 'ಕೃಷ್ಣ' ಎಂದೇ ಹೆಸರಿಡೋಣ.

ಇವನ ಅಣ್ಣನನ್ನು ನೋಡಿದರೆ ಎಲ್ಲರೂ ಇವನಲ್ಲಿ ರಮಿಸುವಂತಿದ್ದಾನೆ. ಆದುದರಿಂದ ರೋಹಿಣಿಯ ಮಗನಿಗೆ 'ರಾಮ' ಎಂದು ಹೆಸರಿಡುತ್ತೇನೆ''. ರಾಮನು ಬಲಶಾಲಿಯಾದುದರಿಂದ ಬಲರಾಮನೆಂದೂ, ಬಲಭದ್ರನೆಂದೂ ಪ್ರಸಿದ್ಧಿ ಹೊಂದಿದನು. ನಾಮಕರಣವಾದ ಕೆಲವೇ ಸಮಯದಲ್ಲಿ ರಾಮ-ಕೃಷ್ಣರು ಅಂಬೆಗಾಲಿಡಲಾರಂಭಿಸಿದರು. ಆ ವಯಸ್ಸಿನ ಮಕ್ಕಳು ಆಡಬಹುದಾದ ಆಟಗಳನ್ನು ಆಡಲು ತೊಡಗಿದರು. ಆ ಚೆಲುವಿನ ಚಿಣ್ಣರನ್ನು ನೋಡು ಗೋಪಿಯರು, ಗೋಪರು ಏನಾದರೊಂದು ನೆಪಹೇಳಿಕೊಂಡು ನಂದನ ಮನೆಗೆ ಬರುತ್ತಿದ್ದರು. ಕಣ್ಣು ಮನಸ್ಸುಗಳನ್ನು ತುಂಬಿಕೊಂಡು ಹೋಗುವ ಮನಸ್ಸಿಲ್ಲದೆ ಹೋಗುತ್ತಿದ್ದರು. ವಿಶೇಷವಾಗಿ ಅಕ್ಕಪಕ್ಕದ ಮನೆಗಳ ಗೋಪಿಯರಿಗೆ ಆ ಮಕ್ಕಳ ದರ್ಶನವಾಗದಿದ್ದರೆ ನಿದ್ದೆಯೇ ಬರುತ್ತಿರಲಿಲ್ಲ.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

# ಅಜ್ಜಿಕತೆ



- ವೈ. ಶಂಕರನಾರಾಯಣ ರಾವ್, ಪಡುಬಿದ್ರಿ

ಇದು ನನ್ನ ಬಾಲ್ಯಕಾಲದಲ್ಲಿ ನಡೆದ ಘಟನಾವಳಿಗಳ ಒಂದು ತುಣುಕು ಎಂದಿಟ್ಟುಕೊಳ್ಳಿ. ನಾನಾಗ 7-8ನೇ ಕ್ಲಾಸಿನಲ್ಲಿ ಕಲಿಯುತ್ತಿದ್ದ 12-13 ವರ್ಷ ಪ್ರಾಯದ ಹುಡುಗಾಟದ ಹುಡುಗನಾಗಿದ್ದೆ. ನನಗೊಬ್ಬ ಅಜ್ಜಿ (ತಂದೆಯ ತಾಯಿ) ಇದ್ದರು. ಆ ಅಜ್ಜಿ ನನ್ನದೇ ಪ್ರಾಯದ ಕೆಲವು ಬ್ರಾಹ್ಮಣ ಮಕ್ಕಳ ಅಜ್ಜಿಯರಂತೆ ವೈಧವ್ಯವನ್ನು ಅಪ್ಪಿಕೊಂಡ ಕೆಂಪು ಸೀರೆಯುಟ್ಟ, ರವಕೆ ಧರಿಸದ, ಬೋಳು ತಲೆಯ, ಬಾಯಿಯಲ್ಲಿ ಕೆಲವೇ ಹಲ್ಲುಗಳು ಉಳಿದಿದ್ದ ವೃದ್ಧೆಯಾಗಿದ್ದರು. ನಾನು ಮೂರು ಜನ ಅಕ್ಕಂದಿರು, ಮೂರು ಜನ ತಂಗಿಯಂದಿರ ನಡುವೆ ಹುಟ್ಟಿದ್ದ ಗಂಡು ಮಗನಾಗಿದ್ದುದರಿಂದ ಅಜ್ಜಿಗೆ ನನ್ನ ಮೇಲೆ ವಿಶೇಷ ಮಮತೆ. ಅಜ್ಜಿ ಓದು ಬರಹ ಬಾರದ ನಿರಕ್ಷರ ಕುಕ್ಷಿಯಾಗಿದ್ದರೂ ಕನ್ನಡ ಗದ್ಯವನ್ನು ಓದಿ ಹೇಳಿದರೆ ತಕ್ಕಮಟ್ಟಿಗೆ ಅರ್ಥ ಮಾಡಿಕೊಳ್ಳಬಲ್ಲವರಾಗಿದ್ದರು. ಸ್ತೋತ್ರಗಳನ್ನು ಕಂಠಪಾಠ ಮಾಡಿಕೊಂಡಿದ್ದರು.

ಕನ್ನಡ ಸಾಹಿತ್ಯದಲ್ಲಿ ನವೋದಯದ ಹೊಂಗಿರಣ ಮೂಡಿ ಬರುತ್ತಿದ್ದ ಕಾಲವದು. ಅಜ್ಜಿಗೆ ನಾನು ದಿನನಿತ್ಯವೂ ಯಾವುದಾದರೊಂದು ಕನ್ನಡ ಕತೆ ಪುಸ್ತಕವನ್ನೋ ಕಾದಂಬರಿಯನ್ನೊ ಓದು ಹೇಳಬೇಕು. ಆಗ ಕನ್ನಡದಲ್ಲಿ ಬರುತ್ತಿದ್ದದ್ದು ಚಂದಮಾಮ, ಬಾಲಮಿತ್ರಗಳಂತಹ ಮಕ್ಕಳ ಕತೆಯ ಮಾಸಿಕಗಳು; ಗಳಗನಾಥರ ಚಾರಿತ್ರಿಕ ಕಾದಂಬರಿಗಳು ಸಾನೆ ಗುರೂಜಿಯವರ 'ಶಾಮನ ತಾಯಿ'ಯಂತಹ ಆತ್ಮಕತೆಗಳು; ಕಾರಂತರ 'ಸನ್ಯಾಸಿಯ ಬದುಕು', 'ಮರಳಿ ಮಣ್ಣಿಗೆ', ಅನಕೃ ಅವರ 'ಸಂಧ್ಯಾರಾಗ', 'ಉದಯರಾಗ', ದೇವುಡು ಅವರ 'ಮಹಾಬ್ರಾಹ್ಮಣ'ದಂತಹ ಕಾದಂಬರಿಗಳು, ನರಸಿಂಹಯ್ಯ, ರಾಮಮೂರ್ತಿ ಅವರ ಪತ್ತೇದಾರಿ ಕಾದಂಬರಿಗಳು-ಇತ್ಯಾದಿ.

ಓದಿ ಹೇಳುವುದು ಉದ್ದದ ಕತೆ-ಕಾದಂಬರಿಯಾದರೆ ನಾನು ಅಜ್ಜಿಗೆ ಒಂದಷ್ಟು ಪುಟಗಳನ್ನು ಪ್ರತಿ ದಿನ ಓದಿ ಹೇಳಿ ಮುಂದುವರಿಸುತ್ತಾ ಕೆಲವು ದಿನಗಳಲ್ಲಿ ಅದನ್ನು ಮುಗಿಸುತ್ತಿದ್ದೆ. ಓದುವ ಮೊದಲು ಅಜ್ಜಿಗೆ ಹಿಂದಿನ ದಿನ ಕತೆ ಎಲ್ಲಿಯ ವರೆಗೆ ಓದಿದ್ದೆ ಎಂದು ಜ್ಞಾಪಕವಿದೆಯೇ ಎಂದು ಪರೀಕ್ಷಿಸಲು 'ಅಜ್ಜಿ ಎಲ್ಲಿಂದ ಪ್ರಾರಂಭಿಸಲಿ?' ಎಂದು ಅವರನ್ನೇ ಕೇಳುತ್ತಿದ್ದೆ. ಆಗ ಅಜ್ಜಿ ಹಿಂದಿನ ದಿನ ನಿಲ್ಲಿಸಿದ್ದ ಕಥಾ ಸಂದರ್ಭವನ್ನು ಸರಿಯಾಗಿಯೇ ನೆನಪಿಸಿಕೊಡುತ್ತಿದ್ದರು, ಉದಾ :-''ಆ ಒರ್ನಾಳಿ ಬೀದಿಯಲ್ಲಿ ಹಾಡುತ್ತಾ ಹೋಗುತ್ತಿದ್ದ ಭಿಕ್ಷುಕಿಯನ್ನು ಮಾತನಾಡಿಸಿದಳಲ್ಲಾ, ಅಲ್ಲಿ ಪ್ರಾರಂಭಿಸು'' ಎಂದು ಮುಂತಾದ ಸುಳುವನ್ನು ಕೊಡುತ್ತಿದ್ದರು. ಕಥಾನಾಯಕಿ ಮೃಣಾಲಿನಿ ಅವರ ಬಾಯಿಯಲ್ಲಿ 'ಒರ್ನಾಳಿ' ಆಗುತ್ತಿದ್ದಳು; ಹಾಗೆಯೇ ಡಾಕ್ಟರ್ 'ದಾಕುದಾರ್ರು', ಕಂಡಕ್ಟರ್ 'ಕಂಡ್ರೆಕುಟ್ಟಿ' ಮತ್ತು ಇನ್ನೂ ಹಲವು ನಾಮಪದಗಳು ಅವರ ಬಾಯಲ್ಲಿ ಬೇರೆಯೇ ಅರ್ಥಾಂತರ-ರೂಪಾಂತರ ಹೊಂದುತ್ತಿದ್ದವು.

ಸ್ವಾರಸ್ಯಕರ, ಕುತೂಹಲಕರ ಮತ್ತು ನಿಗೂಢ ಸಂದರ್ಭಗಳು ಬಂದಾಗ ನಾನು ಓದಿದ ಭಾಗಗಳು ಅಜ್ಜಿಯ ಮೇಲೆ ಏನು ಪರಿಣಾಮ ಬೀರಿದೆ ಎಂಬುದನ್ನು ತಿಳಿಯಲು ನಾನು ಅವರ ಮುಖಭಾವವನ್ನು ಪರಿಶೀಲಿಸುತ್ತಿದ್ದೆ. ಹಾಸ್ಯದ ಸಂದರ್ಭದಲ್ಲಿ ಅಜ್ಜಿಯ ಮುಖ ನಗುವಿನಿಂದ ಅರಳುತ್ತಿತ್ತು. ದುಃಖದ ಸಂದರ್ಭದಲ್ಲಿ ''ಪಾಪ ಒಳ್ಳೆಯ ಗುಣದ ಹೆಣ್ಣು. ಅವಳಿಗೆ ಹಾಗೆ ಆಗಬಾರದಿತ್ತು'', ದುಷ್ಟಪಾತ್ರಗಳ ದುರ್ದೆಶೆಗೆ ''ಅವನಿಗೆ ಹಾಗೆಯೇ ಆಗಬೇಕು'' ಎಂದು ಇತ್ಯಾದಿಯಾಗಿ ಪ್ರತಿಕ್ರಿಯೆ ಅವರಿಂದ ಬರುತ್ತಿತ್ತು. ಅರ್ಥವಾಗದ ವಿಷಯಗಳನ್ನು ನಾನು ಬಿಡಿಸಿ ಹೇಳಿದರೆ ''ಹಾಗಾ ಮಗಾ, ಗೊತ್ತಾಯಿತು. ಮುಂದೆ ಓದು'' ಎನ್ನುತ್ತಿದ್ದರು.

ಆ ದಿನದ ಕಥಾಭಾಗವನ್ನು ಓದಿ ಮುಗಿಸಿದ ನಂತರ ನಾನೂ ನನ್ನ ಸಹೋದರಿಯರೂ ಕೂಡಿ, ಪ್ರತಿಯಾಗಿ ಒಂದು ಕತೆಯನ್ನೋ ತನ್ನ ಸ್ವಾನುಭವವನ್ನೋ ನಮಗೆ ಹೇಳುವಂತೆ ಅಜ್ಜಿಯನ್ನು ಒತ್ತಾಯಿಸುತ್ತಿದ್ದೆವು. ಬಾಲ್ಯದಲ್ಲಿ ನನ್ನಲ್ಲಿದ್ದ ಒಂದು ದುರ್ಗುಣವೆಂದರೆ ನಾನು ಯಾವ ಕುತೂಹಲದ ವಿಚಾರವನ್ನೂ ತರ್ಕಕ್ಕೆ ಒಡ್ಡದೆ ಒಪ್ಪುವ ಅಭ್ಯಾಸದವನಾಗಿರಲಿಲ್ಲ. ಅದು ನಾನು ಆ ಕಾಲದಲ್ಲಿ ಓದುತ್ತಿದ್ದ ಪತ್ತೇದಾರಿ ಕಾದಂಬರಿಗಳ ಪ್ರಭಾವದಿಂದ ಇರಬೇಕು. (ಆದರೆ ನನ್ನ ಈಗಿನ ಪ್ರಾಯಕ್ಕೆ ಸಾಗಿ ಬಂದ ದಾರಿಯಲ್ಲಿ ನಾನು ಸಾಕಷ್ಟು ಸುಧಾರಿಸಿಕೊಂಡಿದ್ದು ಯಾರಾದರೂ ''ನಾನು ಹಿಡಿದ ಮೊಲಕ್ಕೆ ಎರಡು ಕೊಂಬು'' ಎಂದು ಹೇಳಿದರೆ, ಹೇಳಿದ ಜನ ಯಾರೆಂದು ಗಮನಿಸಿ ರಾಜೀಭಾವದಿಂದ ''ನೀವು ಹೇಳಿದ್ದು ನೂರಕ್ಕೆ ನೂರು ಸತ್ಯ'' ಎಂದು ಪರಿಶೀಲಿಸದೆಯೇ ಒಪ್ಪುವಷ್ಟು ಜಾಣ ಉದಾರವಾದಿಯಾಗಿದ್ದೇನೆ.) ನನ್ನ ಈ ದುರ್ಗುಣವನ್ನು ತಿಳಿದಿದ್ದ ನನ್ನ ಹಿರಿಯ ಸಹೋದರಿಯರು ಕತೆಯ ನಡುವೆ ಪ್ರಶ್ನೆ ಕೇಳಿ ಅಜ್ಜಿಯ ಲಹರಿಯನ್ನು ನಾನು ಕೆಡಿಸಬಾರದಾಗಿಯೂ ಕತೆಯು ಕೊನೆಗೊಂಡ ಬಳಿಕವೇ ಪ್ರಶ್ನೆಯನ್ನು ಕೇಳಬೇಕೆಂದೂ ತಾಕೀತು ಮಾಡಿ ಸುಮ್ಮನಿರಿಸುತ್ತಿದ್ದರು. ಅಜ್ಜಿ ಒಂದು ದಿನ ಹೇಳಿದ ತನ್ನ ಸ್ವಾನುಭವದ ಕತೆಯನ್ನು ಅವರ ಮಾತುಗಳಲ್ಲಿಯೇ ಕೇಳಿ :-

''ನನ್ನ ತಂದೆ ಆ ಊರಿನ (ಊರಿನ ಹೆಸರು ಇಲ್ಲಿ ಬೇಡ) ಈಶ್ವರ ದೇವಸ್ಥಾನದಲ್ಲಿ ಕೈಂಕರ್ಯ ಮಾಡುತ್ತಿದ್ದದ್ದು ಅಲ್ವಾ. ಆಗ ನಾನು ಇವನಷ್ಟೇ (ನನ್ನನ್ನು ತೋರಿಸಿ) ದೊಡ್ಡವಳಿದ್ದಿರಬೇಕು. ನನ್ನ ಮನೆಯ ಸಮೀಪವೇ ನನ್ನ ಪ್ರೀತಿಯ ಗೆಳತಿಯ ಮನೆ. ನನ್ನದೇ ಪ್ರಾಯ. ತುಂಬ ಚಂದದ ಬ್ರಾಹ್ಮಣ ಹುಡುಗಿ ಆಕೆ. ದೇವಸ್ಥಾನ ತಗ್ಗಿನಲ್ಲಿ ಇದ್ದರೆ ಎದುರಿಗೆ ಸ್ವಲ್ಪ ದೂರ ಎತ್ತರದಲ್ಲಿದ್ದ ಹಾಡಿಯಲ್ಲಿ ಒಂದು ದೊಡ್ಡ ರೆಂಜೆಯ ಮರ ಇತ್ತು. ಹೂ ಬಿಡುವ ಕಾಲದಲ್ಲಿ ರೆಂಬೆ-ರೆಂಬೆಗಳಲ್ಲಿಯೂ ಗೊಂಚಲು-ಗೊಂಚಲು ಘಮ-ಘಮಿಸುವ ಹೂಗಳ ವೈಭವ. ಬೆಳಗ್ಗೆ ಮರದ ಸುತ್ತು ಮುತ್ತಲೆಲ್ಲಾ ಉದುರಿದ ಹೂಗಳ ಹಾಸು. ಹೂಗಳನ್ನು ಆರಿಸಲು ಸುತ್ತಮುತ್ತಲಿನ ಮನೆಗಳ ಹುಡುಗಿಯರ ದಂಡೇ ಮರದಡಿ ಸೇರುತ್ತಿತ್ತು. ಅಲ್ಲದೇ ಸಂಗ್ರಹಿಸಲು ನಮ್ಮೊಳಗೆ ತುರುಸಿನ ಸ್ಪರ್ಧೆ ನಡೆಯುತ್ತಿತ್ತು.''

''ಆಗಿನ ಕಾಲದಲ್ಲಿ ನಾವು ರಾತ್ರಿ ಬೇಗನೇ ಊಟ ಮುಗಿಸಿ 8 - $8^1/_2$ ಗಂಟೆಯ ಒಳಗೆ ಎಣ್ಣೆಯ ದೀಪ ನಂದಿಸಿ ಮಲಗುತ್ತಿದ್ದದ್ದು ಅಲ್ವಾ? ಆ ದಿನ ಬಹುಶಃ ಹುಣ್ಣಿಮೆಯ ರಾತ್ರಿ ಇರಬೇಕು. ನಾನು ಮಲಗುವಾಗ ನಾಳೆ ಬೆಳಕು ಮೂಡುವ ಸ್ವಲ್ಪ ಮೊದಲೇ ಎದ್ದು, ಗೆಳತಿಯನ್ನೂ ಎಬ್ಬಿಸಿ ನಾವಿಬ್ಬರೂ ಹೂಗಳನ್ನು ಸಂಗ್ರಹಿಸಿ ಮತ್ತೆ ಬರುವವರನ್ನು ಬರಿಗೈಯಲ್ಲಿ ಹಿಂದೆ ಕಳುಹಿಸಬೇಕೆಂದು ಉಪಾಯ ಆಲೋಚಿಸಿದೆ. ಆಗ ಈಗಿರುವಂತೆಯೇ ಹೆಚ್ಚಿನ ಮನೆಗಳ ಚಾವಡಿಗಳಿಗೆ ದಳಿ-ಬಾಗಿಲು ಇರುತ್ತಿರಲಿಲ್ಲ. ಮಕ್ಕಳು ದೊಡ್ಡವರೊಡನೆ ಚಾವಡಿಯಲ್ಲಿಯೇ ಮಲಗುತ್ತಿದ್ದರು. ನನಗೆ ಎಷ್ಟು ಹೊತ್ತಿಗೆ ಎಚ್ಚರವಾಯಿತೋ ಏನೋ, ಗೊತ್ತಿಲ್ಲ. ಸಮಯ ನೋಡಲು ಆಗ ಮನೆಗಳಲ್ಲಿ ಗಡಿಯಾರ ಎಲ್ಲಿತ್ತು? ನೋಡುತ್ತೇನೆ! ಹೊರಗೆ ಅಂಗಳದಲ್ಲಿ ಹಾಲಿನಂತಹ ಬೆಳಕು ಚೆಲ್ಲಿದೆ. ಇನ್ನು ತಡಮಾಡಿದರೆ ಕೆಲಸ ಕೆಟ್ಟಂತೆ ಎಂದು ಅವಸರದಿಂದ ಬೇಗನೇ ಎದ್ದು ಅಂಗಳದ ಮೂಲೆಯಲ್ಲಿದ್ದ ತೆಂಗಿನ ಕಟ್ಟೆಯಲ್ಲಿ ಮೂತ್ರ ವಿಸರ್ಜಿಸಿ ಪಕ್ಕದ ಮನೆಗೆ ಹೋಗಿ ಚಾವಡಿಯಲ್ಲಿ ಮಲಗಿದ್ದ ನನ್ನ ಗೆಳತಿಯನ್ನು ಎಬ್ಬಿಸಿದೆ. ಇಬ್ಬರೂ ಕೈ-ಕೈ ಜೋಡಿಸಿಕೊಂಡು ಮರದ ಬಳಿಗೆ ಹೋದೆವು.''

''ಮರದಿಂದ ಹೂಗಳು ಉದುರಲು ಇನ್ನೂ ಆರಂಭವಾಗಿರಲಿಲ್ಲ. ಆಕಾಶದಲ್ಲಿ ನೆತ್ತಿಯ ಮೇಲೆ ಚಂದ್ರ ಬೆಳದಿಂಗಳನ್ನು ಚೆಲ್ಲುತ್ತಾ ಇದ್ದ. ಜೀರುಂಡೆಗಳ 'ಕಿರ್ರ್' ಎಂಬ ಶಬ್ದವನ್ನು ಬಿಟ್ಟರೆ ದೂರದಲ್ಲಿ ಒಂದೆರಡು ನಾಯಿಗಳು ಬೊಗಳುತ್ತಿರುವುದು ಮಾತ್ರ ಕೇಳಿಸುತ್ತಾ ಇತ್ತು. ಗಾಳಿ ಸ್ವಲ್ಪ ಜೋರಾಗಿಯೇ ಬೀಸುತ್ತಿತ್ತು. ನಾವು ಬೆಳದಿಂಗಳನ್ನೇ ಮುಂಜಾವಿನ ಬೆಳಕು ಎಂದು ಭ್ರಮಿಸಿ ಮೋಸಹೋಗಿ ಮರದ ಬುಡಕ್ಕೆ ಬಂದದ್ದು ಗೊತ್ತಾಗಿ ಮನಸ್ಸಿನಲ್ಲಿ ಸಣ್ಣಗೆ ಪುಕು ಪುಕು ಸುರುವಾಯಿತು. ದೇವಸ್ಥಾನದ ಎದುರಿನ ಭಾಗದ ಅಂಗಣವನ್ನು ನಾವು ನೋಡುತ್ತೇವೆ! ನೋಡುವುದೇನನ್ನು? ಒಂದು ಉದ್ದದ ಸಾಲು-ಮುಂದಿನದ್ದು ದೊಡ್ಡದು; ಅದರ ಹಿಂದಿನದ್ದು ಸ್ವಲ್ಪ ಚಿಕ್ಕದು-ಹೀಗೆ ಚಿಕ್ಕದು ಚಿಕ್ಕದಾಗುತ್ತಾ ಕೊನೆಯದು 5-6 ವರ್ಷದ ಮಗುವಿನಷ್ಟೇ ಸಣ್ಣದು! ಸಾಲಿನ ಎದುರಿನಿಂದ ಹಿಂದಿನ ತನಕ ಒಂದೇ ಒಂದು ಉದ್ದ-ಅಗಲದ ಬಿಳಿ ಬಟ್ಟೆಯನ್ನು ತಲೆಯಿಂದ ಕಾಲಿನ ತನಕ ಮುಖ-ಮೈ ಕಾಣದಂತೆ ಮುಸುಕು ಹಾಕಿಕೊಂಡಿವೆ. ಅವು ನಡೆಯುತ್ತಾ ಹೋಗಿ ದೇವಸ್ಥಾನದ ಕೆರೆಗೆ ಇಳಿದು ಕೈ-ಕಾಲು ತೊಳೆದುಕೊಂಡು ಮೇಲೆ ಬಂದು ಕೊಡಿಮರದ ಸುತ್ತ ಸೇರಿದವು. ಒಂದು ಅರ್ಧ ಘಂಟೆ ಮಧುರವಾದ ಧ್ವನಿಯಲ್ಲಿ ಲಿಂಗಾಷ್ಟಕ, ವಿಶ್ವನಾಥಾಷ್ಟಕ, ಬಿಲ್ವಾಷ್ಟಕ ಮೊದಲಾದವುಗಳನು ಹಾಡಿ ಈಶ್ವರನನ್ನು ಸ್ತುತಿಸಿದವು. ಆ ಸ್ತೋತ್ರಗಳು ಈಗಲೂ ನನ್ನ ಕಿವಿಗಳಲ್ಲಿ ನಿನ್ನೆ ಕೇಳಿದ ಹಾಗೆ ಅನಿಸುತ್ತಿವೆ. ನಾನು ಆಗಲೇ ಊಹಿಸಿದೆ, ಇವು ಶಿವಗಣಗಳೆಂದು. ಉಪಾಸನೆಗೆ ಬಂದವುಗಳೆಂದು.''

''ನನ್ನ ಗೆಳತಿ ಹೆದರಿಕೆಯಿಂದ ಥರ-ಥರ ನಡುಗುತ್ತಾ ಅರೆ ಪ್ರಜ್ಞಾವಸ್ಥೆಗೆ ಜಾರಿದ್ದಾಳೆ. ನಾನು ಮೊದಲೇ ಗಟ್ಟಿ ಪಿಂಡ. ಹಾಗೆಲ್ಲ ಹೆದರುವವಳು ಅಲ್ಲ, ಅಲ್ವಾ ಮಕ್ಕಳೇ? ನನ್ನ ಗೆಳತಿಯನು ಮರದ ಮರೆಗೆ ಸೇರಿಸಿ ಮುಂದೆ ಏನು ಸಂಭವಿಸುವುದೆಂದು ಮರೆಯಾಗಿಯೇ ನೋಡುತ್ತಾ ನಿಂತೆ. ಸ್ತೋತ್ರ ಮುಗಿಸಿದ ಶಿವಗಣಗಳು ಪುನಃ ಸಾಲಾಗಿ ದೇವಸ್ಥಾನದ ಅಂಗಣದ ಸುತ್ತ ಪ್ರದಕ್ಷಿಣೆ ಬರಲು ತೊಡಗಿ ತಿರುವಿನಲ್ಲಿ ಮರೆಯಾದವು. ಇದೇ ಸುಸಂದರ್ಭ ಎಂದುಕೊಂಡು ನಾನು ಗೆಳತಿಯನ್ನು ಬಗಲಲ್ಲಿ ಆಧರಿಸಿಕೊಂಡು ಅವಸರವಸರಾಗಿ ಅವಳ ಮನೆ ಸೇರಿಸಿ ಮಲಗಿಸಿ ನನ್ನ ಮನೆಗೆ ಬಂದು ಚಾಪೆ ಸೇರಿ ಸ್ವಸ್ಥ ಮಲಗಿದೆ. ಮುಂದೆ ನನಗೆ ಯಾವಾಗ ನಿದ್ರೆ ಬಂತೋ ಏನೋ? ಬೆಳ್ಳಂಬೆಳಗ್ಗೆ ನನ್ನ ತಾಯಿ ''ಈ ಹುಡುಗಿಗೆ ಏನು ಇವತ್ತು ಎಂದೂ ಇಲ್ಲದ ಗಡದ್ದು ನಿದ್ದೆ?'' ಎಂದು ನನ್ನನ್ನು ಬಲವಾಗಿ ತಟ್ಟಿ ಎಚ್ಚರಿಸಿದಾಗಲೇ ನಾನು ಎದ್ದದ್ದು. ನನ್ನ ಗೆಳತಿಗೆ ಮಲಗಿದವಳಿಗೆ ಹೆದರಿಕೆಯಿಂದ ಕೆಂಡದಂತಹ ಜ್ವರ ಬಂತಂತೆ.''

ಇಷ್ಟು ಹೇಳಿ ಅಜ್ಜಿ ತನ್ನ ಕತೆ ಮುಗಿಸಿದರು. ಆಗಲೇ ನನ್ನ ಪತ್ತೇದಾರಿ ಬುದ್ಧಿ ಜಾಗೃತವಾಯಿತು. ಆ ಮೇಲೆ ಸುರುವಾಯಿತು ನೋಡಿ ನನ್ನ ತಾರ್ಕಿಕ ಪ್ರಶ್ನೆಗಳ ಸುರಿಮಳೆ. ನಮ್ಮ ನಡುವೆ ನಡೆದ ಪ್ರಶ್ನೋತ್ತರಗಳ ಸಂಭಾಷಣೆ ಹೆಚ್ಚು ಕಡಮೆ ಹೀಗಿತ್ತು :-

ನಾನು : ಅಲ್ಲಜ್ಜಿ, ಶಿವಗಣಗಳು ಶಿವ-ಪಾರ್ವತಿಯರ ಸೇವೆ ಮಾಡಿಕೊಂಡು ಕೈಲಾಸದಲ್ಲಿ ಶಿವನೊಟ್ಟಿಗೇ ಇರುವುದು ಅಲ್ವಾ? ಅವು ಪ್ರತ್ಯೇಕ ಉಪಾಸನೆಗೆ ದೇವಸ್ಥಾನಕ್ಕೆ ಯಾಕೆ ಬರಬೇಕು? ಅದೂ ಸಾವಿರಾರು ಬೇರೆ ಶಿವಾಲಯಗಳು ಇರುವಾಗ ನಿಮ್ಮೂರಿನ ದೇವಸ್ಥಾನಕ್ಕೆ? ಅವು ಎಲ್ಲಿಂದ ಬಂದದ್ದು? ಆಕಾಶದಿಂದಲಾ?

ಅಜ್ಜಿ : ಬಂದಿದವಪ್ಪ ನಮ್ಮ ದೇವಸ್ಥಾನಕ್ಕೆ ಅವುಗಳಷ್ಟಕ್ಕೇ. ನನಗೇನು ಗೊತ್ತು ಎಲ್ಲಿಂದ ಯಾಕೆ ಬಂದಿದವಂತ? ನಾನು ಅವುಗಳನ್ನು ಕೇಳಲಿಕ್ಕೆ ಹೋಗಿದ್ದೇನಾ ಮಗಾ?

ನಾನು : ಅಜ್ಜಿ ನೀವು ಈಗಲೂ ಧೈರ್ಯಶಾಲಿ. ಇದು ನಮಗೆ ಗೊತ್ತು. ಆದರೆ ನಿಮ್ಮ ಗೆಳತಿ ಪುಕ್ಕಲು ಅಂತ ಕಾಣುತ್ತದೆ. ಆಗ ಚಂದ್ರ ಆಕಾಶದಲ್ಲಿ ನಡು ನೆತ್ತಿಯ ಆಚೀಚೆಯಲ್ಲಿದ್ದ ಎಂದಿಟ್ಟುಕೊಳ್ಳುವ. ಎಡೆಗಡೆ ಹಾಡಿಯ ಮರಗಳ ನೆರಳು. ಬಲಗಡೆ ದೇವಸ್ಥಾನ. ಅಂಗಣದ ನಡುವಿನ ಸಪೂರ ದಾರಿಯಲ್ಲಿ ಹಾಸಿದ್ದ ಬೆಳ್ಳನೇ ಬೆಳದಿಂಗಳು. ಗಾಳಿಯ ರಭಸಕ್ಕೆ ಮರಗಳ ಕೊಂಬೆಗಳ ಎಡೆಯಿಂದ ನುಸುಳುವ ನೆರಳು ಬೆಳಕಿನ ಚೆಲ್ಲಾಟ. ಮೇಲೆ ಚಲಿಸುವ ಮೋಡಗಳ ಮರೆಯಿಂದ ಚಂದ್ರನ ಕಣ್ಣು ಮುಚ್ಚಿಲೆಯಾಟ. ಅರೆನಿದ್ದೆಯ ಮಂಪರಿನಲ್ಲಿದ್ದ ನೀವಿಬ್ಬರೂ ಇದನ್ನೇ ಒಂದು ಚಲಿಸುವ ಗಣಗಳ ಸಾಲು ಎಂದು ಭ್ರಮಿಸಿದ್ದೀರೋ ಹೇಗೆ?

ಅಜ್ಜಿ : ಹಾಗಾದರೆ ನಾನು ಇವೇ ಕಿವಿಗಳಿಂದ ಸ್ತೋತ್ರ ಕೇಳಿದ್ದು ಸುಳ್ಳಾ ಅಣ್ಣಾ?

ನಾನು : ಹೋಗಿಯಜ್ಜೀ, ನೀವು ಕೇಳಿದ್ದು ಲಿಂಗಾಷ್ಟಕ, ವಿಶ್ವನಾಥಾಷ್ಟಕ, ಬಿಲ್ವಾಷ್ಟಕ ಅಂತ ಹೇಳಿದ್ದೀರಾ. ನೀವು ದಿನಾಲೂ ದೇವಸ್ಥಾನದಲ್ಲಿ ಪೂಜೆ ಭಟ್ಟರ ಬಾಯಿಯಿಂದ ಅದನ್ನೇ ಕೇಳುತ್ತಿದ್ದದ್ದು ಅಲ್ಲಾ? ಈಗಲೂ ಸಾಯಂಕಾಲ ದೇವರ ಎದುರು ಅದನ್ನೇ ಪಠಿಸುತ್ತಿರುತ್ತೀರಿ. ರಾತ್ರಿ ಕಾಲದ ಆ ಜೀರುಂಡೆಗಳ ಧ್ವನಿ, ಗಾಳಿಯ ಸುಯ್ಯಲು, ಮರಗಳ ಮರ್ಮರ ರವ; ನಿಮಗಿಬ್ಬರಿಗೂ ನಿದ್ದೆಯ ಮಂಪರು ಬೇರೆ. ಇವೆಲ್ಲಾ ಸೇರಿ ನಿಮ್ಮಿಬ್ಬರನ್ನೂ ಭ್ರಮಾಲೋಕಕ್ಕೊಯ್ದು ಸ್ತೋತ್ರದ ಭ್ರಮೆ ಹುಟ್ಟಿಸಿರಬಹುದಲ್ಲವೇ?

ಅಜ್ಜಿ : ಏನೋಪ್ಪ, ನಾನು ನೋಡಿದ್ದು, ಕೇಳಿದ್ದು ಹದಿನಾರಾಣೆ ನಿಜ.

ನಾನು : ಶಿವಗಣಗಳನ್ನು ಕಣ್ಣಾರೆ ನೋಡಿದ ನೀವು ಧನ್ಯರೇ ಸರಿ. ಅದಿರಲಿ ಅಜ್ಜಿ. ಆ ನಿಮ್ಮ ಪ್ರೀತಿಯ ಗೆಳತಿ ಅನಂತರ ಜ್ವರ ತಲೆಗೆ ಏರಿ ಸತ್ತಳಾ ಹೇಗೆ?

ಇದನ್ನು ಕೇಳಿದ ನನ್ನಜ್ಜಿ ತಾಳ್ಮೆ ಕಳೆದುಕೊಂಡರು. ಕೋಪ ನೆತ್ತಿಗೇರಿ ''ನಿನ್ನ ತಲೆ. ಅಧಿಕ ಪ್ರಸಂಗದ ಹಡೆ ಮಾಣಿ'' ಎಂದು ಹೇಳಿ ಮೇಲೆದ್ದು ನನ್ನ ತಲೆಗೊಂದು ಮೊಟಕಿ ಹೊರಟು ಹೋದರು. ◆

## ಬ್ರಹ್ಮೋಪದೇಶ

### ಚಿ। ಶಶಾಂಕ

ಮುಂಬೈಯಲ್ಲಿರುವ ಶ್ರೀಮತಿ ಸುಕನ್ಯಾ ಮತ್ತು ನಂದಳಿಕೆ ಶ್ರೀ ಉದಯಚಂದ್ರರವರ ಪುತ್ರ ಶಶಾಂಕನ ಬ್ರಹ್ಮೋಪದೇಶವು ತಾ.15-5-2009 ರಂದು ನಂದಳಿಕೆ ಶ್ರೀ ಮಹಾಲಿಂಗೇಶ್ವರ ದೇವಳದ ಸಭಾಭವನದಲ್ಲಿ ನೆರವೇರಿತು.

★★★★

### ಚಿ। ರೋಹನ್

ಪಾರಂಕಿಯ ಶ್ರೀಮತಿ ಚೇತನಾ ಮತ್ತು ಶ್ರೀ ವಸಂತ ಅಧಿಕಾರಿ ಇವರ ಪುತ್ರ ರೋಹನ್‌ನ ಬ್ರಹ್ಮೋಪದೇಶವು ತಾ.21-5-2009ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಶಾರಧ್ವತ ಯಜ್ಞಾಂಗಣದಲ್ಲಿ ನೆರವೇರಿತು.

★★★★

### ಚಿ। ರಾಧೇಶ್ ಮತ್ತು ಚಿ। ವಿಜೇತ್

ಅಜ್ಜಾವರದ ದಿ। ರಮೇಶ ಮತ್ತು ಜಯಲಕ್ಷ್ಮೀ ಇವರ ಪುತ್ರ ರಾಧೇಶ್ ಹಾಗೂ ಶ್ರೀಮತಿ ಜ್ಯೋತಿ ಮತ್ತು ಶ್ರೀ ವೀರಕೇಸರಿ ಇವರ ಪುತ್ರ ವಿಜೇತ್‌ನ ಬ್ರಹ್ಮೋಪದೇಶವು ತಾ.28-5-09 ರಂದು ಸುಳ್ಯದ ಶ್ರೀ ಚೆನ್ನಕೇಶವ ದೇವಸ್ಥಾನದಲ್ಲಿ ನೆರವೇರಿತು.

PRAMOD
AUTOMOBILES
Ph : 2491723 (0)
2493633 (H.O.)
2212723 (R)
KARANGALPADY, MANGALORE -575 003.
: Wholesale & Retail Dealers in :
2 & 3 WHEELERS SPARES & ACCESSORIES
Prop. :Ln.K. HARSHA KUMAR

## ಮಾಂಗಲ್ಯಂ ತಂತುನಾನೇನ ....

ಉಡುಪಿ ಕುಂಜಿಬೆಟ್ಟುವಿನಲ್ಲಿರುವ ಶ್ರೀಮತಿ ಉಷಾ ಮತ್ತು ಶ್ರೀ ಮೋಹನ್‌ದೇವ್ ಅದ್ಯಪಾಡಿ ಇವರ ಪುತ್ರಿ **ಅಶ್ವಿನಿ** ಹಾಗೂ ಶ್ರೀಮತಿ ಮತ್ತು ಶ್ರೀ ಪಿ. ಎಸ್. ಸುಬ್ರಹ್ಮಣ್ಯ ಹೆಬ್ಬಾರರ ಪುತ್ರ **ಅನಂತ ಕುಮಾರ** ಇವರ ವಿವಾಹವು ತಾ.21-5-2009 ರಂದು ಉಡುಪಿ ರಥಬೀದಿಯ ಮಂತ್ರಾಲಯ ಸಭಾಭವನದಲ್ಲಿ ನೆರವೇರಿತು.

★★★★

ಕಾಂತಾವರದ ಶ್ರೀಮತಿ ಸುಗುಣಾಂಬ ಮತ್ತು ಶ್ರೀ ಕೆ. ಶ್ರೀಪತಿ ರಾಯರ ಪುತ್ರ **ಹರಿಪ್ರಸಾದ** ಹಾಗೂ ಮಸ್ಕಿಬೈಲು ದಿ| ಯೋಗೀಂದ್ರರಾವ್ ಮತ್ತು ಶ್ರೀಮತಿ ಪ್ರೇಮಾವತಿಯವರ ಪುತ್ರಿ **ನಾಗಲಕ್ಷ್ಮಿ** ಇವರ ವಿವಾಹವು ತಾ.17-5-2009ರಂದು ಉಡುಪಿ ರಥಬೀದಿಯಲ್ಲಿರುವ ಮಂತ್ರಾಲಯ ಸಭಾಭವನದಲ್ಲಿ ನೆರವೇರಿತು.

★★★★

ತಡಂಬೈಲಿನಲ್ಲಿರುವ ಶ್ರೀಮತಿ ಉಷಾ ಮತ್ತು ಶ್ರೀ ಎಸ್. ಪ್ರಭಾಕರರಾಯರ ಪುತ್ರ **ಕಿರಣ್ ಕುಮಾರ್** ಹಾಗೂ ಶ್ರೀಮತಿ ಪುಷ್ಪಾ ಮತ್ತು ಶ್ರೀ ಬೈಕಾಡಿ ಭಾಸ್ಕರರಾಯರ ಪುತ್ರಿ **ಸ್ವಾತಿ** ಇವರ ವಿವಾಹವು ತಾ.08-05-2009ರಂದು ಪುನರೂರು ಶ್ರೀ ವಿಶ್ವನಾಥ ದೇವಳದ ಕಲ್ಯಾಣಮಂಟಪದಲ್ಲಿ ನೆರವೇರಿತು.

★★★★

ಶ್ರೀಮತಿ ಮತ್ತು ಶ್ರೀ ಗೋಪಾಲಕೃಷ್ಣರಾವ್, ಸಿತ್ಲ ಇವರ ಪುತ್ರ **ರಾಮಚಂದ್ರ**, ಹಾಗೂ ಪುತ್ತೂರು ತಾಲೂಕು ಮರ್ಧಾಳದಲ್ಲಿರುವ ಶ್ರೀಮತಿ ಮತ್ತು ಶ್ರೀ ಪಡುಬೆಳ್ಳೆ ರಾಘವೇಂದ್ರರಾವ್ ಇವರ ಪುತ್ರಿ **ಜ್ಯೋತಿ** ಇವರ ವಿವಾಹವು ತಾ.10-5-2009 ರಂದು ಪುತ್ತೂರು ಕಲ್ಲಾರೆ ಶ್ರೀ ರಾಘವೇಂದ್ರ ಸ್ವಾಮಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಶ್ರೀಮತಿ ಮತ್ತು ಶ್ರೀ ಕೆ. ಎಸ್. ಲಕ್ಷ್ಮೀನಾರಾಯಣ ಹೆಬ್ಬಾರರ ಪುತ್ರ **ಹರ್ಷ** ಹಾಗೂ ಪಾದೆಬೆಟ್ಟು ದಿ| ವೆಂಕಟೇಶರಾವ್‌ರವರ ಪುತ್ರಿ **ಸುಚಿತ್ರಾ**, ಇವರ ವಿವಾಹವು ತಾ.1-6-2009 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

ಬನ್ನಂಜೆ ಗುರುರಾಜರಾಯರ ಪುತ್ರ **ಉಮೇಶ್** ಹಾಗೂ ಸತಾರದಲ್ಲಿರುವ ಕುಮಕಾಗುಡೇ ಅಂಗಡಿ ಶ್ರೀ ಮೋಹನ ಸುಬ್ರಾಯ ಶ್ಯಾನುಭಾಗರ ಪುತ್ರಿ **ಪೂಜಾ** ಇವರ ವಿವಾಹವು ತಾ.8-5-2009 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

## ನಿಧನ

### ಶ್ರೀಮತಿ ಯಶೋದಾ ಎಲ್.ರಾವ್

ಶ್ರೀ ಕೆ. ಲಕ್ಷ್ಮೀನಾರಾಯಣ ರಾವ್ ಅಂಬಾಗಿಲು ಇವರ ಪತ್ನಿ ಶ್ರೀಮತಿ ಯಶೋದಾ ಎಲ್.ರಾವ್ ಇವರು ತಾ.17-05-2009ರಂದು ನಿಧನರಾದರು. ಇವರು ಓರ್ವ ಪುತ್ರಿ, ಹಾಗೂ ಅಪಾರ ಬಂಧು-ಬಳಗವನ್ನೂ ಅಗಲಿದ್ದಾರೆ.

## ಮಿಥುನ ಮಾಸದ ವಿಶೇಷ ದಿನಗಳು

| | |
|---|---|
| 14-06-2009 | ವೃಷಭ ಸಂಕ್ರಮಣ |
| 19-06-2009 | ಸರ್ವೈಕಾದಶೀ |
| 20-06-2009 | ಪ್ರದೋಷಃ |
| 21-06-2009 | ಆರ್ದ್ರಾ ನಕ್ಷತ್ರಾರಂಭ |
| 22-06-2009 | ಅಮಾವಾಸ್ಯಾ |
| 03-07-2009 | ಸರ್ವೈಕಾದಶೀ |
| 04-07-2009 | ಪ್ರದೋಷಃ |
| 05-07-2009 | ಪುನರ್ವಸು ನಕ್ಷತ್ರಾರಂಭ |
| 07-07-2009 | ಪೂರ್ಣಿಮಾ |
| 11-07-2009 | ಸಂಕಷ್ಟಹರ ಚತುರ್ಥೀ (ಚಂದ್ರೋದಯ ರಾತ್ರಿ ಗಂ.9.55ಕ್ಕೆ) |
| 16-07-2009 | ಕರ್ಕಾಟಕ ಸಂಕ್ರಮಣ |

## ಅಭಿನಂದನೆ

### ಅಭಿಲಾಷ ವಿ.




ಅಭಿಲಾಷ ವಿ. 2009ರ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಶೇ.96 (576) ಅಂಕಗಳನ್ನು ಪಡೆದಿರುತ್ತಾರೆ. ಇವರು ಪಿ.ಸಿ.ಎಮ್.ಬಿ.ಯಲ್ಲಿ 97.25%, ಸಿಇಟಿಯಲ್ಲಿ ವೈದ್ಯಕೀಯದಲ್ಲಿ 245ನೇ ರ್‍ಯಾಂಕ್, ಇಂಜಿನಿಯರಿಂಗ್‌ನಲ್ಲಿ 890ನೇ ರ್‍ಯಾಂಕ್ ಪಡೆದಿರುತ್ತಾರೆ. ಇವರು ಕಾರ್ಕಳದ ಶ್ರೀಮತಿ ಸೀತಾಲಕ್ಷ್ಮಿ ಮತ್ತು ಶ್ರೀ ವಸಂತರಾವ್ ಇವರ ಸುಪುತ್ರ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಶರತ್‌ರಾವ್



ಶ್ರೀಯುತ ಕೆ. ಪ್ರಭಾಕರ್‌ರಾವ್ (ನಿರ್ದೇಶಕರು, ಎಮ್.ಸಿ.ಎಫ್. ಮಂಗಳೂರು) ಮತ್ತು ಶ್ರೀಮತಿ ಪ್ರಭಾ ಪಿ. ರಾವ್ ಇವರ ಪುತ್ರ ಶರತ್‌ರಾವ್ ಈ ವರ್ಷದ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ (ವಿಜ್ಞಾನ) 95% ಅಂಕಗಳನ್ನು ಪಡೆದು ಉತ್ತೀರ್ಣರಾಗಿರುತ್ತಾರೆ. ಪಿ.ಸಿ.ಎಮ್. ವಿಭಾಗದಲ್ಲಿ 99% ಅಂಕಪಡೆದು ವಿಶೇಷ ಸಾಧನೆಗೈಸಿರುತ್ತಾರೆ. ಅಲ್ಲದೆ ಸಿ.ಇ.ಟಿ. ಪರೀಕ್ಷೆಯಲ್ಲಿ 58ನೇ ರ್‍ಯಾಂಕ್ ಪಡೆದಿರುತ್ತಾರೆ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಸುಮೀತ್ ಜಿ. ರಾವ್



ಬೆಂಗಳೂರಿನಲ್ಲಿ ವಕೀಲರು ಹಾಗೂ ತೆರಿಗೆ ಸಲಹೆಗಾರರೂ ಆಗಿರುವ ಶ್ರೀ ಜಿ. ಕೆ. ರಾವ್ ಮತ್ತು ಶ್ರೀಮತಿ ರೇಖಾ ದಂಪತಿಗಳ ಸುಪುತ್ರ ಶ್ರೀ ಸುಮೀತ್ ಜಿ. ರಾವ್‌ರವರು ಅಮೇರಿಕಾದ ಕ್ಯಾಲಿಫೋರ್ನಿಯಾ ಯುನಿವರ್ಸಿಟಿಯ ಪ್ರಸಿದ್ಧ ಆ್ಯಂಡರ್‌ಸನ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ನಲ್ಲಿ ಎಫ್.ಇ.ಎಮ್.ಬಿ.ಎ.ಗೆ ಪ್ರವೇಶ ಪಡೆದಿದ್ದಾರೆ. ಇವರು ಪ್ರಸ್ತುತ ಕ್ಯಾಲಿಫೋರ್ನಿಯಾದ ಕ್ವಾಲ್‌ಕೋಮ್ ಇಂಕ್‌ನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್‌ರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಸ್ವರೂಪ್ ರಾವ್



ನಿಟ್ಟೆಯ ಡಾ| ಎನ್.ಎಸ್.ಎ.ಎಮ್. ಹೈಸ್ಕೂಲಿನ ವಿದ್ಯಾರ್ಥಿಯಾದ ಸ್ವರೂಪ ರಾವ್ ಇವರು 2008-09ರ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 94.6% (691 ಅಂಕ) ಪಡೆಯುವ ಮೂಲಕ ಉತ್ತಮ ಸಾಧನೆಯನ್ನು ತೋರಿದ್ದಾರೆ. ಭಾಷಣ, ಪ್ರಬಂಧ ಹಾಗೂ ಆಟೋಟಗಳಲ್ಲೂ ಮೇಲುಗೈ ಹೊಂದಿರುವ ಇವರು ನಿಟ್ಟೆ ವಿದ್ಯಾ ಸಂಸ್ಥೆಯಲ್ಲಿ ಉದ್ಯೋಗದಲ್ಲಿರುವ ದಂಪತಿಗಳಾದ ಶ್ರೀ ನಿತ್ಯಾನಂದ ರಾವ್ ಹಾಗೂ ಶ್ರೀಮತಿ ಚೇತನಾ ರಾವ್ ಇವರ ಸುಪುತ್ರ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಕು| ಎಂ. ಎಸ್. ಮೇಧಾ ರಾವ್



ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 94% ಅಂಕಗಳಿಸಿ ತೇರ್ಗಡೆಯಾಗಿರುವ ಕು| ಎಂ. ಎಸ್. ಮೇಧಾ ರಾವ್ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನ ವಿದ್ಯಾರ್ಥಿನಿ. ಇವರು ಉಡುಪಿ ಬೈಂದೂರಿನಲ್ಲಿ ವಾಸವಾಗಿರುವ ಶ್ರೀ ಮೋರಜೆ ವಿ. ಶಿವಪ್ರಸಾದ್ ಮತ್ತು ಶ್ರೀಮತಿ ರಾಜೇಶ್ವರಿ ಪ್ರಸಾದ್ ಇವರ ಪುತ್ರಿ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಚಿ| ಸುಪ್ರೀತ್ ಧಾರೇಶ್ವರ್



ಶ್ರೀ ಶಶಿಧರ್ ಧಾರೇಶ್ವರ್ ಮತ್ತು ಶ್ರೀಮತಿ ಡಾ| ಜಯಶ್ರೀ ಇವರ ಪುತ್ರ ಚಿ| ಸುಪ್ರೀತ್ ಧಾರೇಶ್ವರ್ ಈ ವರ್ಷದ 10ನೇ ತರಗತಿಯ ಐ.ಸಿ.ಎಸ್.ಇ. ಪರೀಕ್ಷೆಯಲ್ಲಿ 91.86% ಅಂಕಗಳನ್ನು ಪಡೆದು ಉತ್ತೀರ್ಣರಾಗಿರುತ್ತಾರೆ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಗೃಹಪ್ರವೇಶ

ಶ್ರೀಮತಿ ರೂಪಾ ಆರ್. ಬೆಳ್ಳೆ ಹಾಗೂ ಡಾ| ರಮೇಶ್‌ರಾವ್ ಬೆಳ್ಳೆ (ಕುಂಜಾರುಗಿರಿ ದಿ| ದೇವರಾಯರ ಪುತ್ರ) ದಂಪತಿಗಳು ಪುತ್ತೂರು ತಾಲೂಕಿನ ಚಿಕ್ಕಮುಡ್ನೂರು ಗ್ರಾಮದ ದಾರಂದಕುಕ್ಕುವಿನಲ್ಲಿ ನಿರ್ಮಿಸಿದ ನೂತನ ಗೃಹ 'ದೇವಿಕಾ'ದ ಪ್ರವೇಶೋತ್ಸವವನ್ನು ತಾ.3-6-2009 ರಂದು ನೆರವೇರಿಸಿದರು.

## ವಿಳಾಸ ಬದಲಾವಣೆ

**ಡಾ| ರಮೇಶ್‌ರಾವ್, ಬೆಳ್ಳೆ**
''ದೇವಿಕಾ'', ದಾರಂದಕುಕ್ಕು,
ಅಂಚೆ ಚಿಕ್ಕಮುಡ್ನೂರು,
ಪುತ್ತೂರು ತಾಲೂಕು, ದ.ಕ. - 574 203.
ಮೊಬೈಲ್ : 94488 42797

★★★★

SADASHIVA RAO
No.1251, "Sri Vaishak"
2nd B Main, 2nd Cross, 2nd Stage,
Srirampura, Mysore -23.

★★★★

R. S. VINAYKUMAR
C/o Canara Bank
Sri Eragappa's Building,
Vokkaleri -563 130,
Kolar Dist., Karnataka State.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ| ವೈ. ಸುದರ್ಶನ ರಾವ್

**ಪ್ರಶ್ನೆ : ಸ್ತನದಲ್ಲಿ ಬೆಳೆದ ಗಡ್ಡೆಗೆ ಚಿಕಿತ್ಸೆ ಏನು?**

**ಉತ್ತರ :** ಸ್ತನದಲ್ಲಿ ಬೆಳೆಯುವ ಗಡ್ಡೆಗಳು ಎರಡು ಬಗೆಯದ್ದು. ಒಂದು ಕ್ಯಾನ್ಸರ್ ಜಾತಿಗೆ ಸೇರಿದ್ದಾದರೆ ಇನ್ನೊಂದು ಕ್ಯಾನ್ಸರ್ ಅಲ್ಲದ್ದು. ಸ್ತನದಲ್ಲಿ ಗಡ್ಡೆಯಿದೆಯೆಂದಾದರೆ ರೋಗಿಗೂ ಹಾಗೂ ಚಿಕಿತ್ಸೆ ನೀಡುವ ವೈದ್ಯನಿಗೂ ಆದಷ್ಟು ಬೇಗನೆ ಈ ಗಡ್ಡೆಯನ್ನು ಕ್ಯಾನ್ಸರ್ ಜಾತಿಗೆ ಸೇರಿದ್ದೋ ಅಲ್ಲವೋ ಎಂದು ವಿವಿಧ ಪರೀಕ್ಷೆಗಳ ಮೂಲಕ ಪತ್ತೆ ಹಚ್ಚುವುದು ಪ್ರಥಮ ಆದ್ಯತೆಯ ವಿಷಯವಾಗಿರುತ್ತದೆ.

ಕ್ಯಾನ್ಸರ್ ಗಡ್ಡೆಯು ನೋವಿಲ್ಲದೆ ಇರುವ, ಒತ್ತಿ ನೋಡಲು ಗಟ್ಟಿಯಾಗಿದ್ದು, ದೊರಗು ಮೇಲ್ಮೈ ಹೊಂದಿ, ಅಲ್ಲಾಡಿಸಿ ನೋಡಿದರೆ ಹೆಚ್ಚಿಗೆ ಅಲ್ಲಾಡದೆ, ಕೆಲವೊಮ್ಮೆ ಚರ್ಮಕ್ಕೆ ಅಂಟಿಕೊಂಡಂತಿರುತ್ತದೆ. ಇಂತಹ ಗಡ್ಡೆಯನ್ನು ಕ್ಯಾನ್ಸರ್ ಎಂದು ಖಚಿತಪಡಿಸಿಕೊಳ್ಳಲು ವೈದ್ಯರು ಮ್ಯಾಮೊಗ್ರಾಫಿ, ಸೊನೋಗ್ರಾಫಿ, ಎಫ್.ಎನ್.ಎ.ಸಿ. (ಸೂಜಿಯ ಮುಖಾಂತರ ಗಡ್ಡೆಯ ಒಂದು ಹನಿ ನೀರನ್ನು ತೆಗೆದು ಸೂಕ್ಷ್ಮದರ್ಶನ ಯಂತ್ರದಲ್ಲಿ ಪರೀಕ್ಷಿಸುವುದು) ಹಾಗೂ ಬಯಾಪ್ಸಿ (ಗಡ್ಡೆಯ ಸಣ್ಣ ತುಂಡನ್ನು ಅಥವಾ ಗಡ್ಡೆ ಸಣ್ಣದಿದ್ದರೆ ಇಡೀ ಗಡ್ಡೆಯನ್ನು ತೆಗೆದು ಸೂಕ್ಷ್ಮದರ್ಶಕದಡಿ ಪರೀಕ್ಷಿಸುವುದು) ಎಂಬ ಪರೀಕ್ಷೆಗಳನ್ನು ನಡೆಸುತ್ತಾರೆ. ಈ ಎಲ್ಲಾ ಪರೀಕ್ಷೆಗಳಲ್ಲಿ ಬಯಾಪ್ಸಿ ಪರೀಕ್ಷೆಯು ಅತ್ಯಂತ ನಿಖರವಾದದ್ದು ಹಾಗೂ ನಂಬಲರ್ಹವಾದದ್ದು.

ಆದುದರಿಂದ ಸ್ತನದಲ್ಲಿ ಗಡ್ಡೆ ಕಂಡುಬಂದರೆ ಯಾವುದೇ ವಯೋಮಾನದವರಿರಲಿ ಅವರು ಗಮನಿಸಬೇಕಾದ ವಿಷಯಗಳಿವು

- ಸ್ತನದ ಕ್ಯಾನ್ಸರ್‌ನ್ನು ಪ್ರಾಥಮಿಕ ಹಂತದಲ್ಲಿ ಪತ್ತೆ ಹಚ್ಚಿ ಚಿಕಿತ್ಸೆ ನಡೆಸಿದಲ್ಲಿ ಸಂಪೂರ್ಣ ಗುಣಮುಖರಾಗುವ ಸಾಧ್ಯತೆ ತುಂಬಾ ಹೆಚ್ಚು. ಆದುದರಿಂದ ಎಷ್ಟು ಬೇಗನೆ ಸಾಧ್ಯವಾಗುವುದೋ ಅಷ್ಟು ಬೇಗ ಈ ಖಾಯಿಲೆಯನ್ನು ಗುರುತು ಹಿಡಿಯುವುದಕ್ಕೂ, ಚಿಕಿತ್ಸೆ ನಡೆಸುವುದಕ್ಕೂ ಆದ್ಯತೆ.
- ಬಟಾಣಿ ಕಾಳಿಗಿಂತಲೂ ಸಣ್ಣದಿದ್ದರೂ ಸರಿ, ಗಡ್ಡೆ ಕಂಡ ದಿನವೇ ಶಸ್ತ್ರಚಿಕಿತ್ಸಾ ತಜ್ಞರನ್ನೇ ಭೇಟಿಮಾಡಿ. ದಯವಿಟ್ಟು ಔಷಧಿ ತೆಗೆದುಕೊಂಡು ನೋಡೋಣ, ಗಡ್ಡೆ ಕರಗಿಸುವ ಮದ್ದು ಮಾಡಿ ನೋಡೋಣ, ಮನೆ ಮದ್ದು ಇತ್ಯಾದಿಗಳಿಗೆ ಖಂಡಿತ ಮನಮಾಡಬೇಡಿ. ಮೊದಲು ಕ್ಯಾನ್ಸರ್ ಅಲ್ಲವೆಂದು ಖಚಿತ ಪಡಿಸಿಕೊಳ್ಳಿ.
- ಎಲ್ಲಾ ಹೆಂಗಸರು ತಿಂಗಳಿಗೊಮ್ಮೆಯಾದರೂ ತಮ್ಮ ಸ್ತನಗಳನ್ನು ಸ್ವತಃ ಪರೀಕ್ಷಿಸಿಕೊಳ್ಳಬೇಕು. ರಕ್ತಸಂಬಂಧಿಗಳಲ್ಲಿ ಸ್ತನಕ್ಯಾನ್ಸರ್ ಇದ್ದವರಿಗೆ ಈ ಸಲಹೆ ಇನ್ನೂ ಹೆಚ್ಚು ಸೂಕ್ತವೆನಿಸುವುದು.

ನಾವು (ವೈದ್ಯರು) ಈಗೀಗ ಸ್ತನಕ್ಯಾನ್ಸರ್ ಖಾಯಿಲೆಯನ್ನು ಗಡ್ಡೆಕಂಡುಬರುವ ಮೊದಲ ಹಂತದಲ್ಲೇ ಪತ್ತೆ ಹಚ್ಚುವ ಪರೀಕ್ಷೆಗಳಿಗೂ ಮಹತ್ವ ಕೊಡುತ್ತಿದ್ದೇವೆ. ಹಾಗಿರುವಾಗ ಗಡ್ಡೆ ಇದ್ದ ಮೇಲೆ ತಡಮಾಡದೆ ಮೇಲೆ ಹೇಳಿದ ಪರೀಕ್ಷೆಗಳಿಂದ ಅದನ್ನು ಕ್ಯಾನ್ಸರ್ ಅಲ್ಲವೆಂದು ಖಚಿತಪಡಿಸಿಕೊಳ್ಳಿ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು.**
**ಸಂಚಾರಿ ದೂರವಾಣಿ ನಂ. : 98451 36322**

## ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ, ಮುಂಬಯಿ-400 037

ಇವರ

**ಕಟ್ಟಡ ಹಾಗೂ ಸುಬ್ರಹ್ಮಣ್ಯ ದೇವಸ್ಥಾನದ ನಿರ್ಮಾಣದ**

ಸಹಾಯಾರ್ಥವಾಗಿ

**ಶ್ರೀ ರಾಮಕೃಷ್ಣ ಕಾಟುಕುಕ್ಕೆ ಮತ್ತು ಸಂಗಡಿಗರಿಂದ**

**ಸುಗಮ ಸಂಗೀತ ಕಾರ್ಯಕ್ರಮ**

ತಾ.14-06-2009ನೇ ರವಿವಾರ ಮಧ್ಯಾಹ್ನ 2-00ರಿಂದ 5-00ರ ವರೆಗೆ

ಸ್ಥಳ : ವಿಶ್ವೇಶ್ವರಯ್ಯ ಸಭಾಗೃಹ, ಕರ್ನಾಟಕ ಸಂಘ, ಮಾತುಂಗಾ ರೋಡ್ (ಪ), ಮುಂಬಯಿ

ಮುಖ್ಯ ಅತಿಥಿ :

**ಶ್ರೀ ಎಂ. ಆರ್. ವಾಸುದೇವ**

(ಏರ್‌ಪೋರ್ಟ್ ಡೈರೆಕ್ಟರ್, ಕೊಯಮುತ್ತೂರು)

**ಗೌರವಪ್ರವೇಶವಿರುವ ಈ ಕಾರ್ಯಕ್ರಮಕ್ಕೆ ಆದರದ ಸ್ವಾಗತ**

| | | |
|---|---|---|
| ಬಿ. ಸತೀಶ್‌ಕುಮಾರ್ | ಡಾ। ಪಿ. ಜಿ. ರಾವ್ | ಬಿ. ಬಾಲಚಂದ್ರರಾವ್ |
| ಕಾರ್ಯದರ್ಶಿ | ಕಾರ್ಯಾಧ್ಯಕ್ಷರು | ಅಧ್ಯಕ್ಷರು |

ಮತ್ತು ಇತರ ಕಾರ್ಯಕಾರಿ ಸಮಿತಿ ಸದಸ್ಯರು

## ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.)

(ಎಲ್.ನಂ.31017)

ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ - 576 101.

ಫೋನ್ : 0820-2522408

**ವಿಶೇಷ ಸರ್ವಸದಸ್ಯರ ಸಭೆಯ ನೋಟೀಸು**

ನಮ್ಮ ಸೊಸೈಟಿಯ ವಿಶೇಷ ಸರ್ವಸದಸ್ಯರ ಸಭೆಯು ತಾ.11-07-2009ನೇ ಶನಿವಾರ ಅಪರಾಹ್ನ 3-30 ಗಂಟೆಗೆ ಸೊಸೈಟಿಯ ಕಛೇರಿಯಿರುವ ಭೂವರಾಹ ಸಂಕೀರ್ಣದಲ್ಲಿ ನಡೆಯಲಿದೆ. ಮಾನ್ಯ ಸದಸ್ಯರೆಲ್ಲರೂ ಈ ಸಭೆಯಲ್ಲಿ ತಪ್ಪದೇ ಹಾಜರಿರಬೇಕಾಗಿ ವಿನಂತಿ.

**ಕಾರ್ಯಕ್ರಮ**

1. 2007-2008ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯ ಅಂಗೀಕಾರ
2. 2007-2008ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ

***ಆಡಳಿತ ಮಂಡಳಿಯ ನಿರ್ದೇಶನದಂತೆ***

ಕಾರ್ಯದರ್ಶಿ ಅಧ್ಯಕ್ಷರು

## ಸಾಮೂಹಿಕ ಗಣಹೋಮ

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು ಸಂಕಷ್ಟಹರ ಚತುರ್ಥಿಯಂದು ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.11-07-2009ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

ಶ್ರೀಶಾರದಾ ದೇವಸ್ಥಾನದಲ್ಲಿ

ಜುಲೈ ತಿಂಗಳಲ್ಲಿ

ತಾ.11-07-2009ರ ಶನಿವಾರ

ಸಂಜೆ ಗಂಟೆ 5-00ರಿಂದ

**ಗಮಕವಾಚನ-ಪ್ರವಚನ**

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**

**ಸರ್ವರಿಗೂ ಆದರದ ಸ್ವಾಗತ**

**- ಶ್ರೀಶಾರದಾ ದೇವಸ್ಥಾನ ವೇದಿಕೆ**

## ಅರ್ಚಕರು ಬೇಕಾಗಿದ್ದಾರೆ

**ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ**

ಶ್ರೀ ಶಾರದಾ ದೇವಸ್ಥಾನಕ್ಕೆ ಪೂಜಾ ವಿಧಿ-ವಿಧಾನಗಳನ್ನು ಬಲ್ಲ ಓರ್ವ ಅರ್ಚಕರು ಬೇಕಾಗಿದ್ದಾರೆ. ಅರ್ಚಕರಿಗೆ ವಾಸ್ತವ್ಯಕ್ಕೆ ಮನೆ ವ್ಯವಸ್ಥೆಯಿದ್ದು, ಪೂರ್ಣಾವಧಿ ಶ್ರೀ ಶಾರದಾ ದೇವಸ್ಥಾನದಲ್ಲಿ ಇರಬೇಕಾಗುತ್ತದೆ.

*ಆಸಕ್ತರು ಕೂಡಲೇ ವಿವರಗಳೊಂದಿಗೆ ಸಂಪರ್ಕಿಸಿರಿ :*

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ-2.**

**ದೂರವಾಣಿ : 0820-2520754**

## ವಧೂ-ವರರ ವೇದಿಕೆ

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.**

ಸಮಾಜದ ವಿವಾಹ ಯೋಗ್ಯ ವಧು-ವರರ ನೋಂದಣಿ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

- ಅಧ್ಯಕ್ಷರು, ವಧೂವರರ ವೇದಿಕೆ,
ಶ್ರೀಶಾರದಾ ಮಂಟಪ
ಕುಂಜಿಬೆಟ್ಟು, ಉಡುಪಿ-2

## ವರ ಬೇಕಾಗಿದೆ

ದಿ। ಸುಬ್ರಹ್ಮಣ್ಯ ರಾವ್ ಮತ್ತು ಶ್ರೀಮತಿ ಗೀತಾ ಸುಬ್ರಹ್ಮಣ್ಯ ರಾವ್ ಇವರ ಮಗಳು ಬಿ.ಇ. ಕಂಪ್ಯೂಟರ್ ವಿಜ್ಞಾನದಲ್ಲಿ ಡಿಗ್ರಿ ಹೊಂದಿರುವ ಸದ್ಯ ಬೆಂಗಳೂರಿನಲ್ಲಿ ಉಪನ್ಯಾಸಕಿ ವೃತ್ತಿಯಲ್ಲಿರುವ 5 ಅಡಿ 5 ಇಂಚು ಎತ್ತರವಿರುವ ಸುಮಾರು 26 ವರ್ಷ ಪ್ರಾಯದ (ಹುಬ್ಬಾ ನಕ್ಷತ್ರ, ಆಂಗೀರಸ ಗೋತ್ರ) ಹುಡುಗಿಗೆ ಸಮಾನ ವಿದ್ಯಾರ್ಹತೆಯುಳ್ಳ ವರ ಬೇಕಾಗಿದೆ.


**ಸಂಪರ್ಕ ದೂರವಾಣಿ :**

**(080-26682179)**

**ಎಮ್. ಮೋಹನ್‌ರಾವ್**

**(0820-2580001)**

## ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (0)

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**


ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ರಾಮಾ ಅಟೋಮೊಬೈಲ್ಸ್


ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

**ಫೋನ್ : 2454355, ಮೊಬೈಲ್ : 94485 45702**



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ



## ಎಲ್ಲಾ ತರಹದ ಸುಖಕರ ಪ್ರವಾಸ-ಪ್ರಯಾಣಕ್ಕಾಗಿ ವಿಚಾರಿಸಿರಿ

**ಸಮಾಜ ಬಾಂಧವರಿಗೆ ವಿಶೇಷ ರಿಯಾಯಿತಿ ಸೌಲಭ್ಯ**

## ಶ್ರೀ "ಕುಂಕುಂ" ಟೂರ್ಸ್

ಐಡಿಯಲ್ ಕಾಂಪ್ಲೆಕ್ಸ್, ಅಲೆವೂರು ರೋಡ್, ಶಾಂತಿನಗರ,



ಮಣಿಪಾಲ - 576 104.

**ಫೋನ್ : 99454 14338**



ಉಡುಪಿ ವಿಶಿಷ್ಟ ರುಚಿಯುಳ್ಳ

## Rao's 'ಮಾತೃಛಾಯಾ'ರವರ

ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸಂಡಿಗೆಗಳು, ಶುದ್ಧ ದನದ ತುಪ್ಪ ಹಾಗೂ ಜೇನು ತುಪ್ಪ

**-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-**

**ಭಾರತ್ ಸ್ಟೋರ್ಸ್**

**ರಥಬೀದಿ, ಉಡುಪಿ - 576 101. ಫೋನ್ : 2522444**

Owned & Published by : K. Venugopal Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org